ಅಪರಂಜಿ

ಜೂನ್ 2004

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಎಚ್.ಕೆ. ರಾಮಚಂದ್ರಮೂರ್ತಿ

ರಾ.ಶಿ.

ಕೆ.ವಿ. ಐಯ್ಯರ್

ಬಿ.ಎಚ್. ಕುಲಕರ್ಣಿ

ಪ್ರಕಾಶ್

ಕಮಲಾ ರಾಮಸ್ವಾಮಿ

ಎಚ್. ಗೋಪಾಲಕೃಷ್ಣ

ಸಿ.ಆರ್. ವಿಶ್ವನಾಥ್

ಇಂದು ರಮೇಶ್

ಪ್ರೇಮಾಭಟ್

ಬಿಡಿ ಪ್ರತಿ: ರೂ. 10.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ,
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 10.00
ವಾರ್ಷಿಕ ಚಂದಾ ರೂ. 100
ಹತ್ತು ವರ್ಷದ ಚಂದಾ ರೂ. 750

Ph: 23345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಜೂನ್ - 2004 ಸಂಚಿಕೆ - 9

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



● ಪ್ರಕಾಶ್

ದ್ವೇಷದಿಂದಲ್ಲ, ಪ್ರೀತಿಯಿಂದ ಎಲ್ಲವನ್ನೂ ಗೆಲ್ಲಬಹುದು.

- ಬುದ್ಧ ಪೂರ್ಣಿಮೆ ಸಂದರ್ಭ ಹೇಳಿಕೆ

ಇದನ್ನ ಬುಷ್ ಮಹಾಶಯರಿಗೆ ಹೇಳಬೇಕು!!

★★★

ಪಾಕ್ ಕ್ರಿಕೆಟ್ ಸರಣಿಯ ಬಳಿಕ ಜಾನ್‌ರೈಟ್ can do no wrong ಅನ್ನಬಹುದು!

★★★

ಧನರಾಜ್ ಭಾರತದ ಹಾಕಿಯ ಸಚಿನ್

- ಬಿಷನ್ ಬೇಡಿ

ಆದರೆ ಐ.ಎಚ್.ಎಫ್. ಅವರನ್ನೇ sixer ಹೊಡೆದು ಕಳಿಸಿತಲ್ಲ??

★★★

ಕ್ರಿಕೆಟ್ ತರಬೇತಿಗೆ ಹಾಜರಾಗದ ನಾಲ್ವರು ಜಿಂಬಾಬ್ವೆ ಆಟಗಾರರು

- ಹರಾರೆ ಸುದ್ದಿ

ಹರ ಹರಾ!!

★★★

ಧನರಾಜ್ ಪಿಳ್ಳೆ vs ಗಿಲ್ ಪಂದ್ಯ ಏನಾಗುತ್ತೋ ನೋಡಬೇಕು!!

★★★

ಸುಳ್ಳು ಜಾತಿ ಪತ್ರ; ಪ್ರಕರಣ ದಾಖಲು
- ದೆಹಲಿ ಸುದ್ದಿ

ಇಂಥವರದೇ ಒಂದು ಜಾತಿ!!

★★★

ಶೌರ್ಯ ಪ್ರಶಸ್ತಿಗಾಗಿ ನಕಲಿ ಗುಂಡಿನ ಚಕಮಕಿ

- ಸೇನಾ ಸುದ್ದಿ

ಉತ್ತರನ ಪೌರುಷ!!

★★★

ಅಕ್ಟೋಬರಿನಲ್ಲಿ ನಡೆಯಲಿರುವ ಭಾರತ - ಆಸ್ಟ್ರೇಲಿಯಾ ಸರಣಿ ಅನಧಿಕೃತ ವಿಶ್ವಕಪ್ ಅಲ್ಲ

- ಕ್ರೀಡಾ ಹೇಳಿಕೆ

ಹೌದು, ಅದು ಅಧಿಕೃತವೇ!!


★★★

ಇರಾಕ್ ಜೈಲು ಹಗರಣ; ಬುಷ್ - ರಮ್ಸಫೆಲ್ಡ್ ಹೇಳಿಕೆಗಳು

- ಸುದ್ದಿ

ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ!!

★★★



ನಮ್ಮನಮ್ಮಲ್ಲಿ

ಅರುವತ್ತರ ದಶಕದ ಕೊನೆಯಲ್ಲಿ ವಿಯಟ್ನಾಮಿನಲ್ಲಿ ನಡೆದ ಮೀ ಲಾಯ್ ನರಹತ್ಯೆ ಓದುಗರಲ್ಲಿ ಹಿರಿಯರಾದ ಹಲವರಿಗೆ ನೆನಪಿರಬಹುದು. ಇದು ನಡೆದಾಗ ನಾನು ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ನನ್ನ ಬಿಳಿಯ ಮಿತ್ರರು ಈ ನರಹತ್ಯೆ ಬಗ್ಗೆ ಮಾತನಾಡುತ್ತಾ, ''ಇಂತಹ ಹೇಯ ಕೃತ್ಯಗಳನ್ನು ಮಾಡುಕ್ಕೆ ಆ ಅಮೆರಿಕನ್ ಸೈನಿಕರಿಗೆ ಹೇಗಾದರೂ ಮನಸ್ಸು ಬಂತು?'' ಎಂದು ಕೇಳುತ್ತಿದ್ದರು. ''ಇದು ವರ್ಣದ್ವೇಷದ ಒಂದು ಮುಖ ಅಷ್ಟೆ'' ಎಂದು ನಾನು ಉತ್ತರಿಸುತ್ತಿದ್ದೆ. ನಮಗಿಂತ ಭಿನ್ನವಾಗಿ ಕಾಣುವವರ ಬಗ್ಗೆ ಇಂತಹ ದ್ವೇಷ ತಾತ್ಸಾರ ಇವುಗಳು, ನಮ್ಮ ಸುಪ್ತ ಮನಸ್ಸಿನಲ್ಲಿ ಬಹು ಆಳವಾಗಿ ಹುದುಗಿರಬೇಕು ಅನ್ನಿಸುತ್ತದೆ ನನಗೆ. ಹಾಗಿಲ್ಲದಿದ್ದರೆ ಇರಾಕಿನ ಅಬು ಗರೈಬ್ ಜೈಲಿನಲ್ಲಿ ಆದ ಘಟನೆಗಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ಅನೇಕ ವರ್ಷಗಳ ಹಿಂದೆ ಅಮೆರಿಕೆಯಲ್ಲಿ ಕರಿಯನೊಬ್ಬನನ್ನು ಬಿಳಿಯ ಪೋಲೀಸರು ಬೀದಿಯ ಮಧ್ಯೆ ಉರುಳಿಸಿ ಹೊಡೆದು ಬಡಿದ ಸುದ್ದಿ ಮನೆಮಾತಾಗಿತ್ತು. ಆ ಮೆಂಟಲ್ ಮೇಕಪ್ ಇರುವ ಜನ ಇರಾಕಿನಂತಹ ಅವಕಾಶ ಸಿಕ್ಕಿದರೆ ಇನ್ನೇನು ತಾನೆ ಮಾಡಬಲ್ಲರು. ಅಮೆರಿಕದ ಈ ನಡವಳಿಕೆಯನ್ನು ನೋಡಿದರೆ ನಾವೇ ಎಷ್ಟೋ ವಾಸಿ ಅನ್ನಿಸುತ್ತದೆ. ಶತಶತಮಾನಗಳಿಂದ ನಮ್ಮ ಭರತಭೂಮಿಯಲ್ಲಿ ನಡೆದ ಜನಾಂಗಗಳ ಮಿಶ್ರಣ, ಇನ್ನೇನಿಲ್ಲದಿದ್ದರೂ ಇತರರ ಧರ್ಮ, ನಡವಳಿಕೆ ಇವುಗಳ ಬಗ್ಗೆ ಸಹಿಷ್ಣುತೆಯನ್ನು ನಮಗೆ ಕಲಿಸಿ ಕೊಟ್ಟಿತು. ಒಬ್ಬ ಬಿಳಿಯ ಮಹಿಳೆಯನ್ನು ಸಿಂಹಾಸನದ ಮೇಲೆ ಕೂರಿಸಿ ಪಟ್ಟ ಕಟ್ಟಲು ಸಿದ್ಧವಾಗಿದ್ದ ಔದಾರ್ಯದ ಹಿನ್ನೆಲೆ ಇದು. ಆಕೆಯೂ ಸಹಾ ಇಂತಹದೇ ಔದಾರ್ಯವನ್ನು ಪ್ರದರ್ಶಿಸಿ ಆ ಅವಕಾಶವನ್ನು ನಿರಾಕರಿಸಿದ್ದು ಬೇರೆಯ ಸಂಗತಿ. ಮಾನವನ ವಿಕಾಸದ ಹಾದಿಯಲ್ಲಿ ಸಹಿಷ್ಣುತೆ, ಔದಾರ್ಯ ಮುಂತಾದ ಗುಣಗಳು ನಿಜವಾದ ಮೈಲಿಗಲ್ಲುಗಳು. ಈ ಔದಾರ್ಯವನ್ನು ಮೈಗೂಡಿಸಿಕೊಳ್ಳಲು ನಮಗೆ ಕಷ್ಟ, ರಾಜ್ಯ ಸಭೆಗೆ ರಾಜೀನಾಮೆಯನ್ನಾದರೂ ನೀಡಿ ನಮ್ಮ ಮೌಲ್ಯವನ್ನು ಉಳಿಸಿಕೊಳ್ಳುತ್ತೇವೆ ಎನ್ನುವವರು, ತಾವು ಅಮೆರಿಕನ್ ವರ್ಣದ್ವೇಷಿಗಳ ಹಂತದಲ್ಲಿದ್ದೇವೆ ಎಂದಾದರೂ ತೃಪ್ತಿ ಪಟ್ಟುಕೊಳ್ಳಲಿ ಎಂಬುದು ನನ್ನ ಅನಿಸಿಕೆ.

ಕಳೆದ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಜನಾರ್ಧನ ಸ್ವಾಮಿಯವರ ಹಲವು ವ್ಯಂಗ್ಯ ಚಿತ್ರಗಳು ನಿಮ್ಮ ಕುತೂಹಲವನ್ನು ಕೆರಳಿಸಿರಬಹುದು. ಅಪರಂಜಿಗೆ ಇವರ ಪರಿಚಯವಾದ ರೀತಿಯೇ ಒಂದು ವಿಶೇಷ. ಸ್ವಲ್ಪ ಸಮಯದ ಹಿಂದೆ ನನ್ನ ನೀಸ್ ವಾಣಿ, ನನಗೊಂದು ಇ-ಮೇಯ್ಲ್ ಫಾರ್ವರ್ಡ್ ಮಾಡಿದ್ದಳು. ಕನ್ನಡ ವ್ಯಂಗ್ಯ ಚಿತ್ರಗಳ ಗೊಂಚಲೊಂದನ್ನು ಅವಳ ಮಗ ಕಳಿಸಿದ್ದ ಪತ್ರ ಅದು. ಕುತೂಹಲದಿಂದ ಅವನ್ನೆಲ್ಲಾ ಒಂದೊಂದಾಗಿ ನೋಡಿದೆ. ದೃಢವಾದ ಆತ್ಮವಿಶ್ವಾಸ ತುಂಬಿದ ಗೆರೆಗಳು, ಸಾಮಾಜಿಕ ಬೈಟ್ ಇದೆ ಎನ್ನಬಹುದಾದ ಮತ್ತು ಉತ್ತಮ ಹಾಸ್ಯಪ್ರಜ್ಞೆ ಇವುಗಳಿಂದ ಕೂಡಿದ ಆ


ವ್ಯಂಗ್ಯ ಚಿತ್ರಗಳ ಕರ್ತೃ ಶ್ರೀ ಜನಾರ್ಧನ ಸ್ವಾಮಿ ಎಂಬುವರು ಎಂದು ತಿಳಿಯಿತು. ಪರವಾಗಿಲ್ಲವೇ ಎಂದುಕೊಂಡು ಹಲವನ್ನು ಅಪರಂಜಿಯಲ್ಲಿ ಪ್ರಕಟಿಸುವ ಉದ್ದೇಶದಿಂದ ಅವರನ್ನು ಸಂಪರ್ಕಿಸಿದೆ. ಬಹಳ ಔದಾರ್ಯದಿಂದ ಅವರು ಒಡನೆಯೇ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

ಶ್ರೀ ಸ್ವಾಮಿಯವರು ವೃತ್ತಿಯಲ್ಲಿ ಇಂಜಿನಿಯರ್. ದಾವಣಗೆರೆಯಲ್ಲಿ ವೃತ್ತಿ ಶಿಕ್ಷಣ ಪಡೆದು ಹಾಗೂ ಬೆಂಗಳೂರಿನ ತಾತಾ ವಿಜ್ಞಾನ ಮಂದಿರದಲ್ಲಿ ಉನ್ನತ ವ್ಯಾಸಂಗ ಮಾಡಿ ಈಗ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಇಂಜಿನಿಯರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹೊಸ ಪೀಳಿಗೆಯ ಕಂಪ್ಯೂಟರುಗಳನ್ನು ನಿರ್ಮಿಸುವಂತಹ ಆಸಕ್ತಿಯುತ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರೂ, ಇವರ ಪ್ರವೃತ್ತಿ ವ್ಯಂಗ್ಯಚಿತ್ರ ರಚನೆ, ಇವರ ಉಸಿರು ಕನ್ನಡ. ಹದಿ ಹರಯದಿಂದಲೂ ಇವರಿಗೆ ಈ ಕಲೆಯಲ್ಲಿ ಆಸಕ್ತಿ ಹಾಗೂ ಪರಿಶ್ರಮ. ಕನ್ನಡದ ಸುಧಾ ತರಂಗ ಹಾಗೂ ಆಂಗ್ಲಭಾಷೆಯ ಅನೇಕ ರಾಷ್ಟ್ರೀಯ ಮತ್ತು ವಿದೇಶಿ ನಿಯತಕಾಲಿಕಗಳಲ್ಲಿ ಇವರ ಚಿತ್ರಗಳು ಬೆಳಕು ಕಂಡಿವೆ. ವ್ಯಂಗ್ಯ ಚಿತ್ರ ರಚನೆಯ ಜೊತೆಗೆ ಸ್ವಾಮಿಯವರು ತಾವು ಓದಿದ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಅಲುಮ್ನಾಯ್ ಅಸೋಸಿಯೇಷನ್ನಿನ ವೆಬ್ ಸೈಟೊಂದನ್ನು ನಿರ್ಮಿಸಿ ತಾವೇ ನಡೆಸುತ್ತಿದ್ದಾರೆ. ಇನ್ನು ಮುಂದೆಯೂ ಅಪರಂಜಿಗೆ ಇವರ ಸಂಪರ್ಕ ವಿರುವಂತಾಗಲಿ, ಇವರ ಉತ್ತಮ ಹಾಸ್ಯಪ್ರಜ್ಞೆಯ ವ್ಯಂಗ್ಯಚಿತ್ರಗಳು ಅಪರಂಜಿಗೆ ನಗೆರಸಿರನ್ನು ರಂಜಿಸಲಿ ಎಂದು ಹಾರೈಸುವೆ. ಸ್ವಾಮಿಯವರನ್ನು jswamy@jswamy.com ವಿಳಾಸದಲ್ಲಿ ಸಂಪಕಿಸಬಹುದು.

ಬೆಳಗಾವಿಯ ಶ್ರೀ ಬಿ.ಎಚ್. ಕುಲಕರ್ಣಿ ಅವರು ನುರಿತ ನಗೆ ಬರಹಗಾರರಾದರೂ, ಅಪರಂಜಿ ಬಳಗಕ್ಕೆ ಇದೀಗ ತಾನೇ ಸೇರಿದ್ದಾರೆ. ಈ ಸಂಚಿಕೆಯಲ್ಲಿ ಬೆಳಕು ಕಂಡಿರುವ ಶ್ರೀಯುತರ ''ರೈಲು'' ಲೇಖನ ಇವರ ಶೈಲಿಯ ಒಂದು ಸ್ಯಾಂಪಲ್. ಇವರಿಂದ ಇನ್ನೂ ಅನೇಕ ಲೇಖನಗಳು ಮೂಡಿ ಬರಲಿ ಎಂಬುದೇ ಅಪರಂಜಿಯ ಹಾರೈಕೆ.

ರೂಪದರ್ಶಿ, ಶಾಂತಲಾ ಮುಂತಾದ ಮರೆಯಲಾಗದ ಕಾದಂಬರಿಗಳ ಖ್ಯಾತ ಲೇಖಕ ಶ್ರೀ ಕೆ.ವಿ. ಐಯ್ಯರ್ ಅವರ ಕಥೆಯೊಂದನ್ನು ಮೊನ್ನೆ ಶೀನು ನನಗ ನೆನಪಿಸಿದ. ಐಯ್ಯರ್ ಅವರ ಸಮುದ್ಯತಾ ಎಂಬ ಕಥಾ ಸಂಕಲನದಲ್ಲಿನ ಈ ಕಥೆಯ ಹೆಸರು ''ಇನ್ಸ್‌ಪೆಕ್ಟರ್ ಗಧಾ'' ಅತ್ಯುತ್ತಮ ಹಾಸ್ಯಪ್ರಜ್ಞೆಗೆ ಮಾದರಿ ಎನ್ನಬಹುದಾದ ಈ ಕಥೆಯನ್ನು ತುಂಬಾ ಹಿಂದೆ ಓದಿ ಬಹುವಾಗಿ ಮೆಚ್ಚಿಕೊಂಡಿದ್ದೆ. ಈಗ ಈ ಕಥೆಯನ್ನು ಅಪರಂಜಿಯ ಓದುಗರಿಗೆ ಪರಿಚಯಿಸಬೇಕು ಅನ್ನಿಸಿತು. ಒಂದೇ ತೊಂದರೆಯೆಂದರೆ ಇದೊಂದು ಅರವತ್ತು ಪುಟಗಳಷ್ಟರ ನೀಳ್ಗತೆ. ಕಂತುಗಳಲ್ಲಾದರೂ ಅದನ್ನು ಪ್ರಕಟಿಸುವ ನಿರ್ಧಾರ ಮಾಡಿ ಈ ಸಂಚಿಕೆಯಲ್ಲಿ ಮೊದಲ ಕಂತನ್ನು ನೀಡಿದ್ದೇನೆ. ಪೂರ್ತಿ ಕಥೆಯನ್ನು ಓದಿದ ನಂತರ ನಿಮ್ಮ ಅನಿಸಿಕೆಗಳನ್ನು ಖಂಡಿತ ಬರೆದು ತಿಳಿಸಿ.

- ಶಿವಕುಮಾರ್



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಎಚ್.ಕೆ. ರಾಮಚಂದ್ರಮೂರ್ತಿ

ನಮಗೆಲ್ಲಾ 50-60 ವರ್ಷಗಳ ಹಿಂದೆ, ನಗುವುದನ್ನು ಕಲಿಸಿದ ರಾ.ಶಿ. ಅವರ ನಗು ಸರಸಿ ಅಪ್ಸರೆಯರು ಚಿರಸ್ಮರಣೀಯ ಕೃತಿ ಎಂಬುದು ನನ್ನ ಅಭಿಪ್ರಾಯ. ನಮ್ಮ ಹಾಸ್ಯ ಸಾಹಿತಿಗಳ ಅತ್ಯಂತ ವಿರಳ ಪಂಕ್ತಿಯಲ್ಲಿ - ಅಷ್ಟದಿಗ್ಗಜಗಳಲ್ಲಿ ('ಅಷ್ಟ' ಎಲ್ಲಿ ಬಂತು? ಮಣ್ಣು..) ಅವರದು 'ಅನಾಮಿಕ'ದ ಸ್ಥಾನ ('ಅಪರಂಜಿ' ಓದುಗರಿಗೆ ನಾನೇನು ವಿವರಿಸಬೇಕಾಗಿಲ್ಲ - 'ಅನಾಮಿಕ' ಶಬ್ದ ಕಾಳಿದಾಸನಿಗೆ ಏಕೆ ಹಚ್ಚಿದರು ಅಂತ)

ಈ ಸ್ವಾರಸ್ಯವಾದ ಪುಟ್ಟ ಪುಸ್ತಕದಲ್ಲಿನ ಕಥಾಚಿತ್ರಣಗಳು ಪ್ಯಾರಡಿಯೋ, ಬರ್ಲೆಸ್ಕ್ಯೋ ಅಥವಾ ಸಿಂಪಲ್ ಸೆಟೈರೋ, ಕಾಮಿಕ್ ಫ್ಯಾಂಟೆಸಿಗಳೋ ಎಂಬ ಅನಗತ್ಯ ಜಿಜ್ಞಾಸೆ, ನನ್ನ ತಲೆ ತಿಂದುದುಂಟು - ಇಂಗ್ಲಿಷ್ ಸಾಹಿತ್ಯ ಓದಿದವನ 'ಕರ್ಮ' ಇದು!

ಈ ಚಿತ್ರಣಗಳಲ್ಲಿ ಅಪ್ಯಾಯಮಾನವೆನಿಸಿದ ಅಶ್ಲೀಲಕ್ಕೆ ಶೃಂಗಾರ ಹಾಸ್ಯದ ಬುರ್ಕಿ ಹಾಕಿದ ಒಂದು ಕಥೆ ಇಲ್ಲಿದೆ, ನೋಡಿ. ಮೇನಕೆಗೆ ಮರುಳಾಗಿ ಸಹಸ್ರಾರು ವರ್ಷ ಲಾಗ ಹಾಕಿ ಸಂಚಯಿಸಿದ್ದ ತಪಸ್ಸನ್ನು ತಿಪ್ಪೆಗೆ ಒಗೆದು ಮುದ್ದು ಶಕುಂತಳೆಯನ್ನು ಹುಟ್ಟಿಸಿ ಓಡಿಹೋದ "ಬ್ರಹ್ಮರ್ಷಿ" ವಿಶ್ವಾಮಿತ್ರ - ಇಲ್ಲಿ ಅವನು ನೇರವಾಗಿ ಬರದಿದ್ದರೂ - ರವಿವರ್ಮ ಚಿರಂತನಗೊಳಿಸಿದ ಆ ವಿಶ್ವಾಮಿತ್ರನ ವರ್ಣಚಿತ್ರ ನೆನಪಾಗಿ ನಗ್ತೀರಿ ನೀವು. ಇಂದ್ರನ 'ಸಾವಿರ ಕಣ್ಣುಗಳು' ಹೇಗೆ ಬಂದವು ಅವನಿಗೆ? ಅದರ ಪೂರ್ವಕಥೆ - ಅಂದರೆ, ಅಹಲ್ಯೆ ಇಂದ್ರನ ಜತೆ ಮಲಗಿದರೂ, ಹೇಗೆ, ಏಕೆ, ಅವಳು 'ಮಹಾಸತಿ' ಆದಳು? ಈ ಕಥೆ ನೆನಪಾಗಿ ನಿಮ್ಮ ಕಣ್ಣಂಚಿನಲ್ಲಿ ಕುಡಿ ನಗೆ ಮಿನುಗೀತು.

ಎಲ್ಲಕ್ಕಿಂತ ಮಿಗಿಲಾಗಿ ಇಲ್ಲೊಬ್ಬ ಮಹಾಗಾಂಪ ಶಿಷ್ಯ ಬೋಳಾಯಿ ರಾಜವೈದ್ಯ ಬರ್ತಾನೆ. ಅವನು ಈ ಅದ್ಭುತ ರಮ್ಯ ಲೋಕದ ಮಹಾ ಮಿಟಕಲಾಡಿ ಸುಂದರಿ ಮೇನಕೆ 'ಎದೆ ಬಿಚ್ಚಿ' ಕರೆದರೂ ಗ್ರಹಿಸದೆ, ಪೆದ್ದುಪೆದ್ದಾಗಿ ಕೇಳುವ ಪ್ರಶ್ನೆಯೇ ಇಲ್ಲಿನ punch line ...

ರಾ.ಶಿ. ಅವರ ಹಾಸ್ಯ 'ಬಿದ್ದು ಬಿದ್ದು' ನಗುವಾ 'ಗುದ್ದಿ ಚಿಗುಟಿ' ನಗಿಸುವಂಥದಲ್ಲ, ಅದರ ಶಬ್ದಾರ್ಥ ರಹಸ್ಯವನ್ನು ಆಸ್ವಾದಿಸಿಯೇ ಅನುಭವಿಸಬೇಕು. ನಾನು ಅದನ್ನು ವಿಶ್ಲೇಷಿಸಹೊರಟರೆ ನೀವು ನನ್ನನ್ನು 'You, Pedantic Fool' ಅಂತೀರಿ .. ಆದ್ದರಿಂದ ನೀವೇ ಅದನ್ನು ನೇರವಾಗಿ (ಮಾರ್ಕೆಟ್ಟಿನ ಮಾವಿನ ಹಣ್ಣಿನ ಸಾಹೇಬು ಹೇಳುವಂತೆ) 'ಊತಾ' ಮಾಡಿ ನೋಡಿ!

"ಎಡಗಡೆಯದೋ ಅಥವಾ"

– ರಾ.ಶಿ.

"ವರ್ಷಾವಧಿ ಹಬ್ಬ ಇವತ್ತು; ದಿನವೂ ಬರುತ್ತೆ ದೀಪಾವಳಿ! ಹೆಣ್ಣಿಗೂ ಎಣ್ಣೆ ನೀರಿನ ಅಗತ್ಯವಿದ್ದೇ ಇರುತ್ತೆ. ಆದುದರಿಂದ ನೀವು ಇವತ್ತು ಬೆಳಿಗ್ಗೆ ಎಣ್ಣೆ ನೀರನ್ನು ಹಾಕಿಕೊಳ್ಳಲೇ ಬೇಕು" ಎಂದು ಮೇನಕೆಯನ್ನು ದಾಸಿ ಒತ್ತಾಯಪಡಿಸಿದಳು.

ಹಿಂದಿನ ರಾತ್ರಿ ದೇವೇಂದ್ರನ ಸಮ್ಮುಖದಲ್ಲಿ "ಬ್ಯೆನ್ಯೆಟ್" ಬ್ಯಾಲೆಯನ್ನು ಯಶಸ್ವಿಯಾಗಿ ಪ್ರದರ್ಶಿಸಿ, ಇಂದ್ರನ ಸಾವಿರ ಕಣ್ಣುಗಳನ್ನು ಕೆಂಪೇರಿಸಿ, ಮನೆಗೆ ಮೇನಕೆಯು ಹಿಂತಿರುಗಿದಾಗ ಬೆಳಗಿನ ಜಾವ ಮೂರು ಗಂಟೆಯಾಗಿತ್ತು. ಮ್ಯೆಮೂಲೆಗಳೆಲ್ಲಾ ನೋಯುತ್ತಿತ್ತು. ಮಲಗಿದಾಗ ನಿದ್ರೆ ಬಂದಿತ್ತು. ಆದರೆ ಬೆಳಗಿನ ಜಾವ ಆರು ಗಂಟೆಯ ಹೊತ್ತಿಗೆ ಎಚ್ಚರವಾಗಿಬಿಟ್ಟಿತ್ತು. ಒಂದು ಹೊರಳು ಹೊರಳಿ ಬ್ಲರ್ನ್ಕೇಟನ್ನು ಕತ್ತಿನ ತನಕ ಎಳೆದುಕೊಂಡು ತಿರುಗಿ ಮಲಗಿದಳು. ಸುಖವಾದ ಸಕ್ಕರೆ ನಿದ್ರೆ ಬಂದಿತ್ತು. ಸಕ್ಕರೆ ನಿದ್ರೆಯಲ್ಲಿ ಸಿಹಿಯಾದ ಕನಸು ಬಿದ್ದೇಬೀಳುತ್ತೆ. ನಿದ್ರೆ ಮಾಡುತ್ತಿದ್ದ ಮೇನಕೆಯ ಮುಖವು, ಕನಸಿನಿಂದಾಗಿ ಮೊಗ್ಗು ಅರಳಿ ಹೂವಾಗುವಂತೆ, ಅರಳಿತು. ಕೆಂನಗೆಯ ಕಪೋಲಗಳ ಮುದ್ದು ಗುಳಿಯಲ್ಲಿ ಕೇಳಿಯಾಡಿತು. ಕನಸಿನಲ್ಲಿ ಬರುವ ಸುಖ ಮತ್ತು ಸೊಬಗು ನನಸಿನಲ್ಲಿ ಹೇಗೆ ತಾನೇ ಬರಲು ಸಾಧ್ಯ? ಅದೂ ಅಲ್ಲದೆ ಕನಸಿನಲ್ಲಿ ಪಟ್ಟ ಸುಖದಿಂದ ದೇಹಕ್ಕೆ ಹೆಚ್ಚು ಆಯಾಸವೂ ಆಗುವುದಿಲ್ಲ. ಅಂತಹ ಸವಿ ಕನಸು ಸಕ್ಕರೆ ನಿದ್ರೆಯಲ್ಲಿ ಬಿದ್ದಿದ್ದಾಗ, ದಾಸಿಯು ಬಂದು ಕಚಗುಳಿಯಿಟ್ಟು ಮೇನಕೆಯನ್ನು ಎಬ್ಬಿಸಿದ್ದಳು. ದಾಸಿಯನ್ನು ಒದ್ದುಬಿಡಲೇ ಎನ್ನುವಷ್ಟು ಕೋಪವು ಮೇನಕೆಗೆ ಉಂಟಾಯಿತು. ಆದರೆ ಆ ದಾಸಿಯು, ಚಿಗುಳಿಯನ್ನು ತಿನ್ನುಕ್ಕೆ ಶುರುಮಾಡಿದಂದಿನಿಂದ ಮೇನಕೆಯ ಸೇವೆಯಲ್ಲೇ ನಿರತಳಾಗಿದ್ದವಳು. ಒಮ್ಮೊಮ್ಮೆ ಅಕಸ್ಮಾತ್ತಾಗಿ ಅಪ್ಸರಸಿಯ ಮನೆಗೆ ಅಭ್ಯಾಗತರು ಇಬ್ಬರು ಒಟ್ಟೊಟ್ಟಾಗಿ ಬಂದಾಗ, ದಾಸಿಯು ಅದೇನು ಜಾಣತನದಿಂದ "ಕೊಕ್ಕು" ಆಟವನ್ನು ಆಡಿಸುತ್ತಿದ್ದಳು! ಅಂತಹ ದಾಸಿಯ ಮೇಲೆ ರೇಗಬಹುದೇ? ಅದೂ ಅಲ್ಲದೆ ಮೇನಕೆಯ ಮ್ಯೆಗೆ ಒಳ್ಳೆಯದಾಗಲಿ ಎಂದಲ್ಲವೇ ದಾಸಿಯು ಇಷ್ಟೊ ಮೆಹನತ್ತನ್ನು ಮಾಡುತ್ತಿರುವುದು.

ಒಲೆಯ ಮುಂದೆ ಬಚ್ಚಲ ಮನೆಯಲ್ಲಿ ಮೇನಕೆಯು ಮಣೆಯ ಮೇಲೆ ಕುಳಿತುಕೊಂಡಳು. "ಇಂದ್ರ, ಚಂದ್ರ, ದೇವೆಂದ್ರ, ವಿಶ್ವಾಮಿತ್ರ, ಮಜೇಂದ್ರ" ಎಂದು ಅನ್ನುತ್ತ ದಾಸಿಯು ಆರು ತೊಟ್ಟು ಎಣ್ಣೆಯನ್ನು ಮೇನಕೆಯ ಬ್ಯೆತಲೆಯ ಮೇಲೆ ಇಟ್ಟು ತಟ್ಟಿದಳು. ನಂತರ ಮ್ಯೆಗೆಲ್ಲಾ ಎಣ್ಣೆಯನ್ನು ಒತಿದಳು. ಅರ್ಧ ತಾಸು ನೆನೆಸಿದಳು. ನಂತರ ಬಚ್ಚಲಲ್ಲಿ ಕೂರಿಸಿ ಬಿಸಿನೀರನ್ನು ಒಂದು ಒಪ್ಪ ಹಾಕಿದಳು. ಮೇನಕೆಯ ಮ್ಯೆಯೆಲ್ಲಾ ಕೆಂಪಾಯಿತು. ಆಗ ದಾಸಿಯು ಹೆಸರು ಹಿಟ್ಟನ್ನು ತೆಗೆದುಕೊಂಡು, ಮೇನಕೆಯ ಮ್ಯೆಗೆ ತಿಕ್ಕಲು ಆರಂಭಿಸಿದಳು.

ಬಲಿತವರಿಗೆ ಹೆಸರು ಹಿಟ್ಟನ್ನು ತಿಕ್ಕುತ್ತಾರೆಯೇ ಎಂಬ ಅನುಮಾನವು ಮಕ್ಕಳೊಂದಿಗ ಓದುಗರಿಗೆ ಬರಬಹುದು. ಆದರೆ ಸ್ವರ್ಗದಲ್ಲಿ ಅಪ್ಸರೆಯರ ಚರ್ಮವು ಮಕ್ಕಳ ಚರ್ಮದಂತೆಯೇ ಎಲ್ಲೆಲ್ಲೂ ಮೃದುವಾಗಿರುತ್ತದೆ. ಅಪ್ಸರಸಿಯರಲ್ಲವೇ? ತಾಯಿ ಗರ್ಭದ ಸರಸ್ಸಿನಲ್ಲಿ ಮಕ್ಕಳಿರುವಂತೆ, ಇವರೂ ಸರಸ್ಸಿನಲ್ಲಿಯೇ ಕೇಳಿಯಾಡುವುದರಿಂದ ಮಕ್ಕಳ ಮೈಯ್ಯಂತೆ, ಇವರು ಬಲು ಮೃದು. ಆದುದರಿಂದಲೇ ಅವರುಗಳ ಅಭ್ಯಂಗನ ಸ್ನಾನಕ್ಕೆ ಹೆಸರು ಹಿಟ್ಟನ್ನು ಕಾಲಾನುಕಾಲದಿಂದಲೂ ದಾಸಿಯರು ಉಪಯೋಗಿಸುತ್ತಾರೆ. ಅಲ್ಲದೆ ಹೆಸರು ಹಿಟ್ಟು ತಂಪು. ಆರ್ಯವೈದ್ಯರು ಹಾಗೆಂದಿದ್ದಾರೆ.

ದಾಸಿಯು ಮೇನಕೆಯ ಬೆನ್ನನ್ನು ಎಣ್ಣೆ ಹೋಗುವಂತೆ ತಿಕ್ಕಿದಳು. ನಂತರ ಎದೆಯ ಭಾಗಕ್ಕೆ, ಹೆಸರು ಹಿಟ್ಟನ್ನು ಹಿಡಿದ ಅಂಗೈಯನ್ನು ಹಾಕಿದಳು. ಒಂದು ಬಾರಿ ಅರ್ಧದಷ್ಟಕ್ಕೆ ಹಗೂರಾಗಿ ತಿಕ್ಕಿದಳು. ಅಷ್ಟೇ!

ಅಷ್ಟರಲ್ಲೇ ಮೇನಕೆಗೆ ಕಚಗುಳಿ ಇಟ್ಟ ಹಾಗಾಯಿತೆನೋ? ಕೂತಿದ್ದಲ್ಲೇ ಮೈಯನ್ನು ಕುಲುಕಿಸುತ್ತ ನಗುಕ್ಕೆ ಶುರು ಮಾಡಿದಳು. ಕಿಲಕಿಲನೆ ನಗುಕ್ಕೆ ಶುರು ಮಾಡಿದ ಮೇನಕೆಯು ತುಸು ನಿಮಿಷಗಳಲ್ಲೇ ಗಹಗಹಿಸಿ ನಗಲಾರಂಭಿಸಿದಳು. ಕುಲುಕುಲು ನಗುವವರ ಮೈಯನ್ನು ತಿಕ್ಕುವುದಾದರೂ ಹೇಗೆ?

''ಯಾಕಕ್ಕ ಹಾಗೆ ನಗುತ್ತೀರಿ? ನಾನು ಕೈಯ್ಯಾಡಿಸಿದರೂ ನಗಬೇಕೇ? ಅಥವಾ ಏನಾದರೂ ನೆನಪು ಬಂತೇ? ಯಾರದಾದರೂ ಜ್ಞಾಪಕವಾಯಿತೇ?'' ಎಂದು ದಾಸಿಯು ಕುತೂಹಲದಿಂದ ಕೇಳಿದಳು. ಅವಳಿಗೂ ಅಂತಹ ವಯಸ್ಸೇ!

''ಹೌದು ಕಣೇ, ವೈದ್ಯನ ನೆನಪಾಯಿತು'' ಎಂದಳು ಮೇನಕೆ, ನಗುವಿನ ಉಬ್ಬರವು ತುಸು ಹತೋಟಿಗೆ ಬಂದಮೇಲೆ.

''ಅದು ಯಾವ ವೈದ್ಯ ಇಲ್ಲಿಗೆ ಬಂದಿದ್ದ. ನನಗೆ ತಿಳಿಯದ ಹಾಗೆ ಅವ ಹೇಗೆ ಬಂದ? ಯಾತಕ್ಕೆ ಬಂದಿದ್ದ? ನಿಮಗೇನೂ ಬೇನೆ ಎಂದೂ ಬಂದಿಲ್ಲವಲ್ಲ? ಇದೇನಕ್ಕ ನೀವನ್ನೋದು? ಅರ್ಥವಾಗಲಿಲ್ಲ'' ಎಂದಳು ದಾಸಿ. ಸ್ವಲ್ಪ ಕೋಪ ಬಂದಿತ್ತು.

ಅಪ್ಸರೆಯರ ದಾಸಿ ಎಂದರೆ ದೇವರಿಗೆ ಪೂಜಾರಿ ಇದ್ದ ಹಾಗೆ. ಸಚಿವರಿಗೆ ಪುಢಾರಿ ಇದ್ದ ಹಾಗೆ. ಹಾವಾಡಿಗನಿಗೆ ಹಂಡೀಬಾಗ್ ಇದ್ದ ಹಾಗೆ. ಪೂಜಾರಿಯನ್ನು ಬುಟ್ಟಿಗೆ ಹಾಕಿಕೊಂಡು, ಕಾಣಿಕೆಯನ್ನು ಸಲ್ಲಿಸಿದ ಮೇಲೆ ದೇವರ ದರ್ಶನವು ಸಾಧ್ಯ. ಅಂತೆಯೇ ದಾಸಿಯರು ಸುಪ್ರಸನ್ನರಾದರೆ ಮಾತ್ರ ಒಡತಿಯರ ದರ್ಶನಲಾಭ ಬಂದವರಿಗೆ ಸಾಧ್ಯ. ಮಾಮೂಲು ಈ ರೀತಿ ಇರುವಲ್ಲಿ, ಯಾವನೋ ಹೆಸರಿಲ್ಲದ ಅಡ್ಡ ಕಸಬಿ ವೈದ್ಯ ಮೇನಕೆಯನ್ನ ಭೇಟಿಯಾಗಿದ್ದ ಎಂದು ದಾಸಿಗೆ ತಿಳಿದಾಗ, ಆಕೆಗೆ ಅವಮಾನ, ಅಶುಭ ಅಸಮಾಧಾನ ಎಲ್ಲವೂ ಮೂಡಿತ್ತು.

ಅದನ್ನು ಕಂಡ ಮೇನಕೆಗೆ ನಗುವು ನಿಂತಿತು.

''ನೀನ್ಯಾಕೆ ಮುನಿಸಿಕೊಳ್ಳುತ್ತೀ? ಇಲ್ಲಲ್ಲಾ ಕಣೇ ವೈದ್ಯ ಬಂದದ್ದು. ಸುರಪತಿಯ ಅಣತಿಯ ಮೇರೆಗೆ ಭೂಲೋಕಕ್ಕೆ ಹೋಗಿದ್ದೆನಲ್ಲಾ? ಅಲ್ಲಿ ವಿಶ್ವಾಮಿತ್ರನ ಜತೆಯಲ್ಲಿ ಸಂಸಾರವನ್ನು ಮಾಡಿಕೊಂಡಿದ್ದೆನಲ್ಲ! ಶಕುಂತಲೆಯು ಹುಟ್ಟಿದಳಲ್ಲ! ಮಗುವನ್ನು ನೋಡಿ ಮುನಿಪುಂಗವನು ಮುನಿದು, ಒಂದು ಕೈಯನ್ನೆತ್ತಿ, ಇನ್ನೊಂದು ಕೈಯನ್ನು ಬೀಸಿ, ಆಶ್ರಮವನ್ನು ಬಿಟ್ಟು ಹೊರಟುಹೋದನಲ್ಲ!''

ಆ ಹೊತ್ತಿನಲ್ಲಿ ನನಗೆ ತುಂಬಾ ಬೇಸರವಾಯಿತು. ಈ ಮಗುವನ್ನು ಯಾರ ಕಾನ್ವೆಂಟಿಗೆ ಸೇರಿಸಿ, ನಾನೂ ಕೈಯಾಡಿಸಿಕೊಂಡು ಸ್ವರ್ಗಕ್ಕೆ ಹಿಂತಿರುಗುವುದು ಎನ್ನಿಸಿತು. ಕಣ್ವಮಹಾಮುನಿಗಳು ನಡೆಸುವ ಕಾನ್ವೆಂಟಿನ ಸುದ್ದಿ ನನಗಾಗ ತಿಳಿದಿರಲಿಲ್ಲ. ಸುರಪತಿಯ ಮಾತನ್ನು ಕೇಳಿಕೊಂಡು ಇಲ್ಲಿಗೆ ಬಂದರೆ ಈ ಪತಿ, ಇದನ್ನು ಸೊಂಟಕ್ಕೆ ಕಟ್ಟಿ ಹೋದನಲ್ಲಾ ಎಂದು ವ್ಯಥೆಯು ಆಯಿತು.

ಅಷ್ಟು ಹೊತ್ತಿಗೆ ಮಗುವು ಅಳುವುದಕ್ಕಾರಂಭಿಸಿತು. ಅದರ ಮುಖವನ್ನು ನೋಡಿದೆ. ಬಲು ಮುದ್ದಾಗಿತ್ತು. ತುಂಡುತುಂಡಾಗಿ ಬೆಳೆದಿತ್ತು. ಧ್ಯಾನ ಧಾರಣ ಸಮಾಧಿ ಎಂದೆನ್ನುವ ಋಷಿ, ಹಸಿರು ಕ್ರಾಂತಿಯಲ್ಲೂ ಪ್ರವೀಣನಾಗಿ, ಇಂತಹ ಹುಲುಸಾದ ಬೆಳೆಯನ್ನು ತೆಗೆದನಲ್ಲ ಎಂದು ಅಭಿಮಾನವೂ ಉಕ್ಕಿತು.

ಮಗು ನನ್ನ ಮೈಯನ್ನು ಪರಚುತ್ತಾ ಅಳುತ್ತಲೇ ಇತ್ತು. ಓಹೋ ಇದಕ್ಕೆ ಹಸಿವಾಗಿದೆ. ಹಾಲೂಡಿಸಿದರೆ ತೆಪ್ಪಗಾಗುತ್ತೆ ಎನ್ನಿಸಿತು.

ಆಶ್ರಮದೊಳಕ್ಕೆ ಹೋಗಲು ಮನಸ್ಸು ಬರಲಿಲ್ಲ. ಬಿಕೊ ಅನ್ನಿಸುತ್ತೇನೋ ಅನ್ನಿಸಿತು. ಆದುದರಿಂದ ಆಶ್ರಮದ ಹಿತ್ತಲ ಕಡೆಗೆ ಹೋಗಿ, ಮಾವಿನ ಮರದ ಕೆಳಗೆ ಕುಳಿತು ಮಗುವಿಗೆ ಹಾಲು ಕುಡಿಸಲು ತೊಡಗಿದೆ.

ಮಗು ಶಕುಂತಲೆಗೆ ಅದೇನು ಆತುರ ಅಂತ? ಅವಕಾಶ ದೊರೆತ ಕೂಡಲೇ ಬಾಯಿ ಹಾಕಿತು. ಮೊದಲಿನಿಂದಲೂ ಶಕುಂತಲೆಗೆ ಒಂದು ಹುಚ್ಚು ಅಭ್ಯಾಸ. ಬಾಯಿನಲ್ಲಿದ್ದುದರಿಂದ ಹಾಲನ್ನು ಕುಡಿಯುವಾಗ, ಇನ್ನೊಂದು ಕೈಯಲ್ಲಿ ಇನ್ನೊಂದನ್ನು ಹಿಡಿದುಕೊಂಡು ತಡವರಿಸುತ್ತಲೇ ಇರುವ ಚಾಳಿ. ಶಕುಂತಲೆಯ ಅಂಗೈಯೂ ಬಲು ಬಲು ಮೃದು. ಆದುದರಿಂದ ನನಗೂ ತುಂಬ ಹಿತವಾಗುತ್ತಿತ್ತು. ಹಾಗೆ ತೋರೆದೆಯಾಗಿ ಹಾಲೂಡಿಸುತ್ತಾ ಕುಳಿತು,

ಹವ್ವಿಯೆಂದೋರಾರು ಹವಳ ಕದ್ದೋರಾರು

ನಾನಲ್ಲ ನಮ್ಮ ಮಗುತಂತೂ

ಅಂತ ಮಗುವನ್ನು ಹಿತವಾಗಿ ತಡವರಿಸುತ್ತ ಹಾಡಲಾರಂಭಿಸಿದ. ಸ್ವಲ್ಪ ಹೊತ್ತು ಮಗು ಹಾಲು ಕುಡಿಯಿತು. ನಂತರ ಬಾಯನ್ನು ದೂರ ಮಾಡಿತು. ಆಗ ನಾನೂ ತಲೆಯೆತ್ತಿದೆ.

ಎದುರಿನಲ್ಲೆ ಸಂಪಿಗೆ ಮರದ ಬುಡದ ಬಳಿ ಒಬ್ಬ ಯುವಕನು ನಿಂತಿದ್ದ. ನನ್ನ ಆಶ್ರಮದ ಹಿತ್ತಲಿಗೆ ಇವನು ಯಾವಾಗ ಬಂದ? ಏಕೆ ಬಂದ? ಎಂದು ನನಗೆ ರೇಗಿತು. ಅವನಾದರೋ ನನ್ನನ್ನೇ, ಅಂದರೆ ಮುಖವನ್ನೆಲ್ಲಾ ದಿಟ್ಟಿಸಿ ನೋಡುತ್ತಿದ್ದ.

''ಯಾರಪ್ಪ ನೀನು? ಇಲ್ಲಿಗೆ ಏಕೆ ಬಂದೆ? ಇದು ವಿಶ್ವಾಮಿತ್ರ ಋಷಿಗಳ ಆಶ್ರಮ ಎಂಬುವುದು ತಿಳಿಯದೆ?'' ಎಂದು ಕೇಳಿದೆ.

ಅವನ ಮೇಲಿನ ಕೋಪವು ಹೆಚ್ಚು ಹೊತ್ತು ಉಳಿಯಲಿಲ್ಲ. ಅಷ್ಟು ಸೊಂಪಾಗಿ ಬೆಳೆದಿದ್ದ ಸುಂದರ ಯುವಕನ ಮೇಲೆ ಕೋಪವು ಹೇಗೆ ಮುಂದುವರಿಯಲು ಸಾಧ್ಯ? ಯೌವನದ ಕಳೆಯೊಂದಿಗೆ ಬುದ್ಧಿವಂತನ ಕಳೆಯೂ ಅವನ ಮುಖದ ಮೇಲೆ ನಲಿದಾಡುತ್ತಿತ್ತು. ಲಕ್ಷಣವಾದ ಉಡುಪನ್ನೇ ಧರಿಸಿದ್ದ. ಆಶ್ರಮ ನಿವಾಸಿಯವನಲ್ಲ; ರಾಜಾಸ್ಥಾನದ ಸುಸಂಸ್ಕೃತ, ಲೌಕೀಕನಿವನು ಎಂದು ಸುಲಭವಾಗಿ ತಿಳಿಯಿತು.

''ರಾಜಾಸ್ಥಾನದಲ್ಲಿ ವೈದ್ಯ ನಾನು, ಮಹಾರಾಣಿಯವರಿಗೆ ಚಿಂತೆಯು ಮೂಡಿತ್ತು. ದೇಹಾಲಸ್ಯವಾದಾಗ ನನಗೆ ಕರೆ ಕಳಿಸಿದರು. ಹೋಗಿ ಪರೀಕ್ಷೆ ಮಾಡಿದಾಗ ಆಲಸ್ಯದ ಕಾರಣವು ಗೊತ್ತಾಯಿತು. ರಾಜಾಸ್ಥಾನಕ್ಕೆ ಯವನ ರಾಜ್ಯದಿಂದ ನರ್ತಕಿಯೊಬ್ಬಳು ಬಂದಿದ್ದುದೂ ತಿಳಿದಿತ್ತು. ಪತಿವಶೀಕರಣ ಸೊಪ್ಪನ್ನು ಹಿಂಡಿ ಗುಗ್ಗುಳವನ್ನುಮಾಡಿ, ರಾಣಿಯ ಕೈಯಿಂದ ಅರಸರಿಗೆ ತಿನ್ನಿಸಿದರೆ, ನರ್ತಕಿಯ ಪೀಡೆಯು ರಾಣಿಗೆ ಬಡಿಯುವುದಿಲ್ಲ ಎಂದು ತೀರ್ಮಾನಿಸಿದೆ. ಪತಿವಶೀಕರಣ ಸೊಪ್ಪು, ವಿಶ್ವಾಮಿತ್ರ ಮುನಿಗಳ ಆಶ್ರಮದಲ್ಲಿ ಸೊಂಪಾಗಿ ಬೆಳೆದಿರುತ್ತದೆ ಎನ್ನುವುದು ಆಯುರ್ವೈದ್ಯರಿಗೆಲ್ಲಾ ತಿಳಿದ ವಿಷಯ. ಆದಕಾರಣ ಇಲ್ಲಿಗೆ ಬಂದೆ. ಸೊಪ್ಪನ್ನುಕುಯ್ದು ಬುಟ್ಟಿಗೆ ಇಡುತ್ತಿದ್ದೆ. ಇಲ್ಲಿ ಯಾರೂ ಆಗ ಇರಲಿಲ್ಲ. ಆದರೆ ಸ್ವಲ್ಪ ಹೊತ್ತಿನಲ್ಲೆ ಸುಮಧುರ ಕಂಠವೊಂದು ಜೋಗುಳವನ್ನು ಹಾಡಿದುದು ಕೇಳಿಸಿತು. ಕಾರಣ ತಲೆ ಎತ್ತಿದೆ. ನಿಮ್ಮನ್ನು ಕಂಡೆ. ಕಾಣುತ್ತಲೇ ನಿಂತುಕೊಂಡೆ'' ಎಂದು ಆ ಆಯುರ್ವೈದ್ಯ ಪ್ರವೀಣನು ನುಡಿದ.

''ಸಾಕಷ್ಟು ಸೊಪ್ಪನ್ನು ಶೇಖರಿಸಿಯಾಯಿತೇ? ಇನ್ನು ಬೇಕಾದರೆ, ತುಳಸೀಕಟ್ಟೆಯ ಬಳಿಯಲ್ಲಿ ಬೆಳೆದಿದೆ'' ಎಂದು ನಾನೆಂದೆ.

ಬೇಗ ಹೊರಟು ಹೋಗುತ್ತಾನೇನೋ ಎಂದು ಒಂದು ರೀತಿಯ ಕಳವಳವಾಯಿತು. ಆದುದರಿಂದಲೇ ಆ ಸಲಹೆಯನ್ನು ಕೊಟ್ಟೆ.

''ಸಾಕಷ್ಟು ಸೊಪ್ಪನ್ನು ಶೇಖರಿಸಿಯಾಗಿದೆ. ಹೆಚ್ಚೇನೂ ಬೇಡ'' ಎಂದು ಅರ್ಧ ಹೇಳಿ ಯಾಕೋ ಮಾತನ್ನು ನಿಲ್ಲಿಸಿದ. ''ಏನೋ ಹೇಳುವುದಕ್ಕೆ ಶುರುಮಾಡಿದ್ದೆಯಲ್ಲ?'' ಎಂದೆ.

''ನಿಮ್ಮನ್ನು ಒಂದು ಪ್ರಶ್ನೆ ಕೇಳಬೇಕು ಅಂತ ಆಸೆ. ಕೇಳಬಹುದೋ ಇಲ್ಲವೋ ಅಂತ ಅನುಮಾನ'' ಎಂದ.

''ಹೆಂಗಸರನ್ನು ಕೇಳಬಾರದೆಂಬ ಅಂತಹ ಪ್ರಶ್ನೆ ಯಾವುದಪ್ಪಾ?'' ಎಂದೆ.

''ಹೆಂಗಸನ್ನೇ ಕೇಳಿ ಉತ್ತರ ಪಡೆಯಬೇಕಾದ ಪ್ರಶ್ನೆ ಅದು. ಆದರೆ ನೀವು ಮಹಾ ಋಷಿಗಳ ಪತ್ನಿ. ಅದಕ್ಕೇ ... '' ಅಂದ.

''ಮಹಾ ಋಷಿಗಳು ಈಗತಾನೆ ಕೈ ಕೊಡವಿಕೊಂಡು ಹಿಂತಿರುಗುವುದಿಲ್ಲ ಎಂದು ಹೇಳಿ ಹೊರಟುಹೋದರು'' ಎಂದು ನಾನು ಪ್ರೋತ್ಸಾಹಿಸಿದೆ.

ಶಕುಂತಲೆಯೇನೋ ನನ್ನ ತೊಡೆಯ ಮೇಲೆ ಮಲಗಿ ಎರಡೂ ಕೈಗಳಿಂದಲೂ ಆಟವಾಡುತ್ತಿದ್ದಳು. ಹೊಟ್ಟೆ ತುಂಬಿದ ಮೇಲೆ ಬಾಯಿಂದ ಏಕೆ ಆಡುತ್ತೆ?

''ನನ್ನ ವೈದ್ಯಕೀಯ ಕಸುಬಿಗೆ ಸಂಬಂಧಪಟ್ಟ ಪ್ರಶ್ನೆಗೆ ನೀವು ದಯಮಾಡಿ ಉತ್ತರಿಸಿದರೆ ತುಂಬಾ ವಂದನೆಗಳು'' ಎಂದ.

ಎಂತಹ ಎಳೆಯ ಯುವಕ. ನಾನಷ್ಟೊ ಹೇಳಿದ ಮೇಲೆ ದಯಮಾಡಿ ಉತ್ತರಿಸಿ ಎಂದೆಲ್ಲ ಅನ್ನುತ್ತಾನೆ. ಎದೆ ಬಿಚ್ಚಿ ಇಂಗಿತವನ್ನು ಸೂಚಿಸಿದ್ದೇನೆ. ಆದರೂ ಪೆಂಗುಪೆಂಗಾಗಿ ಏನೇನೋ ಕೇಳುತ್ತಿದ್ದಾನೆ ಇವನೆಂತಹ ವೈದ್ಯ ಎಂದಂದುಕೊಳ್ಳುತ್ತಿದ್ದೆ.

ಕಡೆಗೆ ಧೈರ್ಯಮಾಡಿ ಕೇಳಿಯೇ ಬಿಟ್ಟ.

''ಆ ಮಗು ನಿಮ್ಮದೇ ಅಲ್ಲವೇ?'' ಎಂದ.

ಎದ್ದು ಹೋಗಿ ಒದ್ದು ಬಿಡಲೇ ಎನ್ನಿಸಿತು. ಇವನೆಂತಹಾ ಮಂಕು? ಮಗುವಿಗೆ ಬಾಣಂತಿಯು ಹಾಲು ಕುಡಿಸಿದ್ದನ್ನು ನೋಡಿದ ಮೇಲೂ ಈ ಪ್ರಶ್ನೆಯನ್ನು ಕೇಳುತ್ತಾನಲ್ಲ ಎಂದು ಮರುಕವಾಯಿತು.

''ಹ್ಞೂ'' ಅಂದೆ ಮುಗುಮ್ಮಾಗಿ.

''ಮಗು ಬಹಳ ಚೆನ್ನಾಗಿ ಬೆಳೆದಿದೆ. ಯಾವ ಟಾನಿಕ್‌ಅನ್ನು ಹಾಕುತ್ತೀರಿ'' ಎಂದು ಅವ ಕೇಳಿದ. ಇವನ ಕುತೂಹಲವೆಲ್ಲ ಕಸುಬಿನ ಮೇಲೆ ಮಾತ್ರ ಎಂದೂ ನನಗೆ ಅರ್ಥವಾಯಿತು. ಮಾತನ್ನು ಮುಂದುವರಿಸಬೇಕು ಎನ್ನುವ ಆಸಕ್ತಿಯೂ ಇಂಗಿತು.

''ಯಾವ ಟಾನಿಕ್ಕು ಇಲ್ಲ. ಬರೀ ಹಾಲು ಮತ್ತು ಹಣ್ಣಿನ ರಸ. ಇನ್ನು ಯಾವ ಮೇಲಾಹಾರವನ್ನೂ ಹಾಕುವುದಿಲ್ಲ'' ಎಂದೆ.

ಈ ಮಾತನ್ನು ಕೇಳಿ ಅವನಿಗೆ ಆಶ್ಚರ್ಯವಾಗಿರಬೇಕು. ದುರುಗುಟ್ಟಿಕೊಂಡು ನೋಡುತ್ತಾ ಅನುಮಾನ ಬಂದವನಂತೆ ತಲೆಯನ್ನು ಕೊಡವಿ,

''ಹಣ್ಣಿನ ರಸ! ಎಡಗಡೆಯದರಲ್ಲೋ ಅಥವಾ'' ಎಂದು ಕೇಳಿದ.

''ಅದರ ಜ್ಞಾಪಕ ಬಂತು ಕಣೇ, ಅದಕ್ಕೇ ನಗು ಬಂತು'' ಎಂದಳು ಮೇನಕೆ.

''ಯಾರು ಯಾರು ಕಣ್ಣು ಹಾಕಿದ್ದಾರೋ, ಯಾರ ದೃಷ್ಟಿ ಬಡಿದಿದೆಯೋ? ಅದರ ಪೀಡೆಯೆಲ್ಲಾ ಹೋಗುವ ಹಾಗೆ ತಿಕ್ಕುತ್ತೀನಿ ಅಕ್ಕ'' ಎಂದು ಹೇಳುತ್ತಾ ಅಭ್ಯಂಜನವನ್ನು ಪೂರೈಸಿದಳು.

★★★

ಇನ್ಸ್‌ಪೆಕ್ಟರ್ ಗಧಾ

(ಕೆ.ವಿ. ಐಯ್ಯರ್ ಅವರ "ಸಮುದ್ಯತಾ" ಸಂಕಲನದಿಂದ)

1

ಏನಂದಿರಿ ವರದಪ್ಪನವರೆ? ದುಃಖದ ಸಂಗತಿ ಎಂದಿರಾ! ಪ್ರಪಂಚದಲ್ಲಿ ನಡೆದುಹೋದ ದುಃಖಸಂಗತಿಗಳನ್ನೆಲ್ಲ ಯಾರಾದರೂ ಪಟ್ಟಿ ಮಾಡುವುದಿದ್ದರೆ, 'ನಮ್ಮ ರಾಮನಗರದ ಗೋಳನ್ನು ಮೊದಲು ಬರೆಯಿರಿ' ಎಂದು ಹೇಳುತ್ತಿದ್ದೆ.

ನಮ್ಮ ರಾಮನಗರದಲ್ಲಿ ಅದುವರೆಗೆ ಇದ್ದ ಪೋಲೀಸು ಇನ್ಸ್‌ಪೆಕ್ಟರು ವರ್ಗವಾಗಿ ಆ ಜಾಗಕ್ಕೆ ಮೀಶೆ ಮಾದಪ್ಪ ವರ್ಗವಾಗಿ ಬಂದ ದಿನದಿಂದಲೇ ಮೊದಲಾಯ್ತು ಆ ಊರಿನ ದುರ್ದೈವ ... ಪಾಪ! ಮೀಶೆ ಮಾದಪ್ಪ ಯಾಕಾದಾನು ದುರ್ದೈವ! ... ಅವನ ಕುದುರೆ ... ಅದು ಒಳ್ಳೇ ಮಾರಿ ಬಂದ ಹಾಗೆ ಬಂತು ಆ ಊರಿಗೆ ... ಕುದುರೆ ಯಾಕಾದಾತು ಅದು! ... ಒಂದು ಕತ್ತೆ ... ಹೇಸರ ಕತ್ತೆ, ಹಾಗೇ ಇತ್ತು ಅದು! ... ಶತವಕ್ರ ... ಅದರ ಮುಸುಡಿನೋ! ... ಕಾಲುಗಳೊ!... ಬಾಗಿದ ಬೆನ್ನೋ ... ಶುದ್ಧ ಅವಲಕ್ಷಣದ ಕುದುರೆ ಅದು.

ಯಾರ್‍ಯಾರೋ ಏನೇನೋ ಆಗಿದ್ದವರು ಹೇಗ್ಹೇಗೊ ಆಗಿ ದೊಡ್ಡವರು ಆಗಿಬಿಡೋದಿಲ್ಲವೆ ಈ ಕಾಲ್ದಲ್ಲಿ! ಹಾಗೇ ಈ ಅವಲಕ್ಷಣದ ಕುದುರೆಗೂ ಈಗ ಏನು ಅಂತಸ್ತು, ಏನು ಪದವಿ ಬಂತೂಂತೀಯ ವರದಪ್ಪ! ... ಈಗ ಅದನ್ನ ಕಟ್ಟೋ ಲಾಯಾನ ಎರಡೂ ವೇಳೆ ಫಿನೈಲ್ ಹಾಕಿ ತೊಳೀತಾರೆ. ದಿನಾ ಅದನ್ನ ಮಾಲೀಸ್ ಮಾಡೋದಕ್ಕೆ ಎರಡಾಳು. ಎರಡೂ ವೇಳೆ ಮಸಾಲೆ ಸೊಪ್ಪು, ಬೇಯಿಸಿದ ಹುರುಳಿ, ಎಳೆಗರಿಕೆ ಹುಲ್ಲು, ಹೊದಿಸೋದಕ್ಕೆ ನಯವಾದ ಕಂಬಳಿ, ನೋಡ್ಕೋಳ್ಳೋಕೆ ಒಬ್ಬ ವೆಟೆರಿನರಿ ಡಾಕ್ಟರು. ದಿನಾ ವಾಕಿಂಗು, ಟ್ರ್ಯಾಟು. ಈಗ ಅದರ ಮೇಲೆ ಕುಳಿತು ಯಾರೂ ಸವಾರಿ ಮಾಡೋದಿಲ್ಲ. ಅದು ಊರಿಂದ ಊರಿಗೆ ಹೋಗಬೇಕಾದರೆ ಅದಕ್ಕೆ ಒಂದು ಕವರ್ಡ್ ವ್ಯಾನು. ಯಾವ ಕಾಲದ ದೊರೆಯ ಪಟ್ಟದ ಕುದುರೇಗೂ ಇರಲಿಲ್ಲಾಪ್ಪ ಈ ವೈಭವ! ಬಂದ್ರೆ, ನೋಡು, ವರದಪ್ಪ ಹೀಗೆ ಬರಬೇಕು, ಅದೃಷ್ಟಾ ಅನ್ನೋದು! ಇಷ್ಟಕ್ಕೂ ಆ ಕುದುರೆ ತಾನಾಗಿ ಸಾಧಿಸಿದ ಮಹತ್ಕಾರ್ಯ ಏನೂ ಇಲ್ಲ; ಆದರೂ ಇದೆಯಲ್ಲ ಪುರಾತನ ವಾಕ್ಯ: 'ಯೇನ ಕೇನ ಉಪಾಯೇನ ಪ್ರಸಿದ್ಧ ಪುರುಷೋ ಭವ' ಅಂದ ಹಾಗೆ - ಆ ಕುದುರೆಯ ದೆಶೆಯಿಂದಲೆ ಮೀಶೆ ಮಾದಪ್ಪನೂ ಅಸಿಸ್ಟೆಂಟ್ ಸೂಪರಿಂಡೆಂಟಾಗಿ ಈಗ ಡಿಸ್ಟ್ರಿಕ್ಟ್ ಸೂಪರಿಂಡೆಂಟೂ ಆಗಿದ್ದಾನೆ.

'ಆ ಕುದುರೇಗೆ ಹ್ಯಾಗೆ ಬಂತು ಈ ವೈಭವ, ಹೇಳು' ಎಂದ ವರದಪ್ಪ.

"ದೊಡ್ಡ ಕಥೇಪ್ಪಾ ಅದು, ಅಂದರೆ ಬಲು ಸ್ವಾರಸ್ಯವಾಗಿದೆ. ಅರ್ಧಗಂಟೆ ಪುರಸತ್ತು ಇದ್ದರೆ, ಕುಳಿತುಕೊ. ಹೇಳ್ತೇನೆ."

''ಹೇಳಪ್ಪ, ಸ್ವಾರಸ್ಯವಾದದ್ದಾದರೆ ನನಗೂ ಕೇಳೋದಕ್ಕೆ ಇಷ್ಟಾನೆ.''

'ನನಗೂ ಹೇಳುವುದಕ್ಕೆ ಆತುರ ...'

ನೋಡಪ್ಪ, ನಮ್ಮ ರಾಮನಗರದ ರಾಮದೇವರ ಬೆಟ್ಟದ ಪಡುವಣ ಕಡೆಗ, ಬೆಟ್ಟದ ಮೇಲಿದೆಯಲ್ಲ, ಒಂದು ಮಣ್ಣಿನ ಕೋಟೆ - ಅದರ ಹೆಸರು ಯಕ್ಷರ ಕೋಟೆ. ಅದರೊಳಗೆ ಒಂದು ಗುಟ್ಟಾದ ಗವಿ. ಆ ಗವೀಲೇ ಇತ್ತು ನಮ್ಮ ಭಟ್ಟಿ. ನನ್ನ ತಂದೆಗಳೂ ನನ್ನ ಚಿಕ್ಕಪ್ಪನೂ ಒಟ್ಟಿಗೇ ನಡಸ್ತಿದ್ರು ಅದನ್ನ ... ನಾಲ್ಕಾರು ವರ್ಷ ಒಳ್ಳೇ ಅದ್ದೂರಿಯಾಗಿ ನಡೀತಪ್ಪ, ನಾವ್ ಸಾವ್‌ಕಾರ್ರು ಆದದ್ದು ಇರಲಿ. ಊರಿನ ನಾಲ್ಕಾರು ಕುಳಗಳೂ ಮನೆ, ಮಠ, ಜಮೀನು, ತೋಟ ಕಂಡ್ರು ಅದರಿಂದ. ನಮಗಾಗಲಿ ಏನಿತ್ತಪ್ಪ ಅದಕ್ಕೂಂಚೆ! ನೀ ಕಾಣೆಯ ವರದಪ್ಪಾ?

ನಮ್ಮೂರಲ್ಲಿ ದೊಡ್ಡ ಪಾದ್ರಿ ದೊರೆ ಇದಾನೆ ನೋಡು. ಅವನು ದೇವ್ರು ಬಂದಹಾಗೆ ಬಂದ ನಮ್ಮೂರಿಗೆ. ಹಿಂದೆ ದೊಡ್ಡ ಯುದ್ಧ ಆಯಿತು ನೋಡು ಯೂರೋಪಿನಲ್ಲಿ; ಆಗ ಆತ ಇನ್ನೂ ಪಾದ್ರಿಯಾಗಿರಲಿಲ್ಲ. ಜರ್ಮನಿಯಲ್ಲಿದ್ದನಂತೆ. ಅವನ ಕೈಕೆಳಗೆ ನಾಲ್ಕು ಭಟ್ಟಿಗಳೂ ಇದ್ದುವಂತೆ. ಹೆಂಡಿರೂ ಮಕ್ಕಳೂ ಎಲ್ಲ ಬಾಂಬು ಬಿದ್ದು ಸತ್ತುಹೋದರಂತೆ. ಆಗ ಅವನಿಗೆ ಜೀವನದಲ್ಲಿ ಜಿಗುಪ್ಸೆ ಹುಟ್ಟಿ, ನಮ್ಮಲ್ಲಿ ಸನ್ಯಾಸ ತೆಗೆದುಕೊಳ್ಳೋ ಹಾಗೆ ದೇವರ ಸೇವೆಗೆ ಸೇರಿ-ಆಮೇಲೆ ಯಾವುದೋ ಮಿಷನ್ನಿಗೆ ಸೇರಿಕೊಂಡು ಚೆನ್ನಾಗಿ ಇಂಗ್ಲೀಷು ಕಲಿತು. ಈ ದೇಶಕ್ಕೆ ಬಂದು ಈಗ ನಮ್ಮೂರಿನ ಚರ್ಚಿಗೆ ಪಾದ್ರಿಯಾಗಿ ಬಂದಿದ್ದಾನೆ.

ನಮ್ಮಪ್ಪನಿಗೂ ಈ ಪಾದ್ರಿಗೂ ಹೇಗೋ ವಿಶ್ವಾಸ ಬೆಳೀತು. ನಮ್ಮಪ್ಪನಿಗೆ ಪಾದ್ರಿ ಹೇಳಿಕೊಟ್ಟ ಪ್ಲಾನೇ ಇದು; ನಮ್ಮ ಭಟ್ಟಿ! ಸಾಮಾನುಗಳು ಇವಿವೇ ಬೇಕು, ಇಷ್ಟಿಷ್ಟೇ ಬೇಕು, ಇಂತಿಷ್ಟೇ ಸೇರಿಸಬೇಕು, ಇಷ್ಟಿಷ್ಟು ದಿನಾನೇ ಮಾಗೋಕೆ ಇಡಬೇಕು, ಮಾಗೋದಕ್ಕೆ ಇಂತಿಷ್ಟೆ ಶಾಖವಿರಬೇಕು; ಅನ್ನೋ ವಿಷಯಾನೆಲ್ಲ ಬಹು ವಿಂಗಡವಾಗಿ ಹೇಳಿಕೊಟ್ಟು, ಪುಣ್ಯ ಕಟ್ಕೊಂಡ ಆ ಪಾದ್ರಿ. ನಾವೂ ಅವರ ಋಣಾನ ಒಂದು ವಿಧವಾಗಿ ತೀರಿಸ್ತಾಲೇ ಇದ್ದೆವು.

ವರದಪ್ಪ, ವಿಲಾಯಿತಿ ವಿಸ್ಕೀನ ನಿವಾಳಿಸಬೇಕು, ನಮ್ಮ ಭಟ್ಟೀಲಿ ಇಳೀತಿದ್ದ ಅಮೃತದ ಮುಂದೆ. ಹಾಗಿತ್ತಪ್ಪ ನಿಜವಾಗಲೂ ನಮ್ಮ ಸರಕು. ಹೆಸರಿಟ್ಟಿವು ಅದಕ್ಕೆ 'ಅಮೃತಾರಿಷ್ಟ' ಅಂತ.

ನಾಲ್ಕು ತಿಂಗಳಲ್ಲಿ ಎಂಟು ಮೂಲೆಗಳಿಗೂ ಇನ್ನೂರು ಇನ್ನೂರು ಮೈಲಿಗಳಷ್ಟು ದೂರ ಹರಡಿತಪ್ಪಾ ನಮ್ಮ ಸರಕಿನ ಕೀರ್ತಿ. ಊರಿಂದೂರಿಗೆ ಹೋಗೋ ಹುಲ್ಲುಗಾಡಿಗಳ ತಳದಲ್ಲೆಲ್ಲ ನಮ್ಮ ಸರಕೇ. ವ್ಯಾಪಾರ ಬಲು ಜೋರಾಗಿತ್ತು.

2

ಪೋಲೀಸ್ ಇನ್ಸ್‌ಪೆಕ್ಟರ್ ಒಬ್ಬ ಒಂದೂರಿಗೆ ಹೊಸದಾಗಿ ಬಂದರೆ ಒಂದಷ್ಟು ದಿನ ಅವನ ದಿರಸು ಬಲು ಗಡಸು, ಬಲು ಜಬರದಸ್ತು .... ಯಾವಾಗಲೂ ಸಿಡುಕುಮುಖ ..

ಯಾರನ್ಕಂಡ್ರೂ, ಗುಮಾನಿ ... ಗುರ್, ಅಂತನ್ನೋದೇ ಜಾಸ್ತಿ. ಇಷ್ಟಕ್ಕೂ ನಮ್ಮ ಕುಲದೋನೆ ಈ ಮೀಶೆ ಮಾದಪ್ಪ... ರಾಕ್ಷಸನ ಮೈಕಟ್ಟು ಅವನದು. ಒಳ್ಳೇ ದೆವ್ವದಂತಹ ಮನುಷ್ಯ, ಗರಡೀಲಿ ಬಲು ವರ್ಷ ಸಾಮು ಮಾಡಿದವನು ಅವನು.

ರಾತ್ರಿ ಹಗಲೂ ಗಸ್ತು ತಿರುಗಿದ್ದೂ ತಿರುಗಿದ್ದೆ, ಈ ಇನ್ಸ್‌ಪೆಕ್ಟರು. ಬೀದಿ ನಾಯಿ, ಪೋಲೀ ದನ, ಬೇವಾರ್ಸಿ ಕತ್ತೆ ಎಲ್ಲಾನೂ ದೊಡ್ಡಿಗೆ ಸೇರಿಸಿದ್ದೂ ಸೇರಿಸಿದ್ದೆ. ಅವನ್ನ ನೋಡಿದ್ರೆ ಸಾಕು, ಊರಿನ ತೊಂಡು ಜನಕ್ಕೆಲ್ಲಾ ಎದೆ ಪುಕಪುಕಾ ಅನ್ನೋ ಹಾಗೆ ಮಾಡಿಬಿಟ್ಟ ಬಂದ ಹೊಸದರಲ್ಲಿ.

'ರಾಮನಗರದಲ್ಲೋ ಅದರ ಸುತ್ತು ಫಾಸಲೆಯಲ್ಲೋ ಎಲ್ಲೋ ದೊಡ್ಡ ಭಟ್ಟಿ ಬಹಳ ದಿನಗಳಿಂದ ಇದೆ. ಅದನ್ನ ಪತ್ತೆ ಮಾಡಿ' ಅಂತ ಸರ್ಕಾರದವರೇ ಸ್ಪೆಷಲ್ ಆಗಿ ಕಳಿಸಿದರು ನಮ್ಮೂರಿಗೆ ಇವನ್ನ. ಇವನೂ 'ಕಂಡು ಹಿಡಿದೇ ತೀರತೇನೆ' ಅಂತ ಮಾತುಕೊಟ್ಟು ಬಂದಿದ್ದನಂತೆ.

ಹಗಲು ರಾತ್ರಿ ಎನ್ನದೆ, ಕೈಯಲ್ಲೊಂದು ರಿವಾಲ್ವರೂ ಒಂದು ದೊಡ್ಡ ಟಾರ್ಚ್‌ಲೈಟೂ ಹಿಡಿದುಕೊಂಡು, ಜತೆಗೆ ಇಬ್ಬರು ಮೂವರು ಪ್ಯಾದೆಗಳನ್ನು ಕಟ್ಟಿಕೊಂಡು ಊರೊಳಗೆ, ಊರ ಹೊರಗೆ, ಒಂದು ಗಿಡ, ಒಂದು ಪೊದೆ, ಒಂದು ಮುರುಕಲು ಜೋಪ್ಡಿ, ಒಂದು ಹಾಳು ಬಾವಿ, ಒಂದು ಹಾಳು ಮಂಟಪ, ಬಿದ್ಹೋದ ಗುಡಿ, ಬಂಡೆ ಬಿರುಕು ಒಂದನ್ನೂ ಬಿಡದೆ ಒಳಗೆ ನೋಡಿ ಪರೀಕ್ಷೆ ಮಾಡಿ ಬರ್ತಿದ್ದ. ಊರ ಹೊರ್ಗೆ ಯಾರಾದರೂ ಭಿಕಾರಿಗಳು ಕಲ್ಲುಸಂದಿಯಲ್ಲೋ, ಮರದ ಕೆಳಗೋ ಅಡುಗೆ ಮಾಡಿಕೊಳ್ಳುತ್ತಿರುವ ಹೊಗೆ ಎದ್ರೆ - ಅಲ್ಲಿ ಕಡೆಕಡೆಗೆ ಪ್ರತಿಯೊಂದು ಗುಡಿಸಲನ್ನೂ ಶೋಧಿಸಿಬಿಟ್ಟ. ಇಷ್ಟೆಲ್ಲ ಮಾಡಿದರೂ ಒಂದು ಕಳ್ಳಭಟ್ಟಿಯೂ ಅವನ ಕೈಗೆ ಸಿಗಲಿಲ್ಲ. ಇದರಿಂದ ಅವನಿಗೆ ರೋಷ ಹೆಚ್ಚಾಯಿತು.

ಈ ಇನ್ಸ್‌ಪೆಕ್ಟರು ಹೀಗೆ ಇನ್ನು ಕೆಲವು ದಿನ ಗಸ್ತು ತಿರುಗಿದರೆ ನಾಲ್ಕೈದು ದಿನಗಳೊಳಗಾಗಿ ಸಿಕ್ಕಿಹೋಗಿಬಿಡಬಹುದು ನಮ್ಮ ಭಟ್ಟಿ ಅನ್ನೋ ಭಯದಿಂದ ನನ್ನ ತಂದೆಗಳೂ ಚಿಕ್ಕಪ್ಪನೂ ಅಲ್ಲಿಂದ ತಮ್ಮ ಭಟ್ಟಿಯನ್ನು ದೂರದ ಇನ್ಯಾವುದಾದರೂ ಕಾಡಿಗೆ ಸಾಗಿಸಿಬಿಡಬೇಕೂ ಅಂತ ಯೋಚನೆ ಮಾಡಿದ್ದರು.

3

ಒಂದು ದಿನ ಬೆಳಿಗ್ಗೆ ಸುಮಾರು ಎಂಟು ಗಂಟೆ ಸಮಯ. ಮನೆಗೆ ಕಾಯಿಪಲ್ಲೆ ತರಬೇಕೆಂತ ನಮ್ಮೂರಿನ ಮಾರ್ಕೆಟ್ಟಿಗೆ ಹೋದೆ. ಕಂಡೆ ನೋಡೂ ವರದಪ್ಪ! ನಾನು ಹುಟ್ಟಿದ ಮೇಲೆ ಅದುವರೆಗೂ ಕಂಡಿದ್ದೇ ಇಲ್ಲಾಪ್ಪಾ. ಅಂಥಾ ಚೆಂದುಳ್ಳೇ ಹುಡುಗಿಯನ್ನ! ... ನನ್ನ ಕಣ್ಣೂ ಬಾಯೂ ತೆರೆದುಹೋಯ್ತು. ಆ ಹುಡುಗಿ ಅಕಸ್ಮಾತ್ ನನ್ನ ನೋಡಿದ್ಲು. ಅವಳ ಒಂದೇ ನೋಟಕ್ಕೆ ನೆಟ್ಕೊಂಡುಬಿಟ್ಟವಪ್ಪ ಪಂಚಬಾಣಗಳೂ ನನ್ನೆದೆಗೆ ಗಟ್ಟಿಯಾಗಿ! ಮಂಕುಬೂದಿ ಎರಚಿದ ಹಾಗಾಯ್ತು:

ಅವಳು ತರಕಾರಿ ಕೊಡ್ಕೊಂಡು ಹೋಗೋಕೇ ಬಂದಿರಬೇಕು ಮಾರ್ಕೆಟ್ಟಿಗೆ ... ಯಾಕೇಂತಿಯೋ? ಹಿಂದೇನೇ ಒಂದು ಮಂಕರಿ ಹಿಡಕೊಂಡು ಹೋಗುತ್ತಿದ್ದಳು ಒಬ್ಬ ಮುದುಕಿ. ಹೋದ ಜ್ಞಾನ ಮರಳುವುದಕ್ಕೆ ನನಗೆ ಒಂದೆರಡು ನಿಮಿಷಗಳೆ ಆದುವು. ಅವಳನ್ನು ಇನ್ನೊಮ್ಮೆ ಅಲ್ಲೆಲ್ಲಿಯಾದರೂ ಕಾಣಬಹುದೆಂದು ಆಶೆಪಟ್ಟು ಆ ಮಾರ್ಕೆಟೆಲ್ಲಾ ಅಲೆದೆ. ಆ ಹೆಣ್ಣು ಮತ್ತೆ ನನ್ನ ಕಣ್ಣಿಗೆ ಬೀಳಲಿಲ್ಲ. ಆ ಹೆಣ್ಣು ಯಾವ ಮಾಯದಲ್ಲಿ ಎಲ್ಲಿಗೆ ಹೋದಳೋ ತಿಳೀಲಿಲ್ಲ. ಈ ಭೂಮೀ ಮೇಲೆ ಇಂತಹ ಚೆಲುವೆಯರೂ ಇರುತ್ತಾರಾ ಅನ್ನೋ ಆಶ್ಚರ್ಯ ತಟ್ಟಿತು ನನಗೆ. 'ಮದುವೆ ಮಾಡಿಕೊಂಡರೆ ಈ ಹುಡುಗಿಯನ್ನೇ ಮದುವೆ ಮಾಡಿಕೋಬೇಕು ... ಇಲ್ಲದಿದ್ದರೆ, ಮದುವೆಯೇ ಬೇಡ' ಅಂತ ನಿರ್ಧರಿಸಿಬಿಟ್ಟೆ.

ನಮ್ಮೂರಿನಲ್ಲಿರೋ ಒಬ್ಬಬ್ಬರನ್ನೂ ನಾನು ಬಲ್ಲೆ. ಈ ಹೆಣ್ಣು ನಮ್ಮೂರಿಗೆ ಹೊಸತಾಗಿ ಬಂದಿರಬೇಕು. ಇದು ಯಾರು ಅನ್ನೋದನ್ನ ಪತ್ತೆ ಮಾಡಲೇಬೇಕು ಅಂದುಕೊಂಡೆ.

ಇಷ್ಟರಲ್ಲಿ ನನ್ನ ಚಿಕ್ಕಪ್ಪ ಹೇಳಿದ್ದ ಮಾತು ಜ್ಞಾಪಕಕ್ಕೆ ಬಂತು. 'ಹತ್ತು ಗಂಟೆ ಸುಮಾರಿಗೆ ಭಟ್ಟಿಗೆ ಬಾ, ತುಂಬ ಅಗತ್ಯದ ಕೆಲಸ ಇದೆ' ಅಂತ ಹೇಳಿದ್ದ. ಚಿಕ್ಕಪ್ಪನ ಮಾತನ್ನ ನಾನೆಂದೂ ಮೀರಿದ್ದಿಲ್ಲ. ಆದ್ದರಿಂದ ಯಕ್ಷರಕೋಟೆಗೆ ಹೊರಟೇ ಬಿಟ್ಟೆ. ಆದರೆ ಯಕ್ಷರ ಕೋಟೆಗೆ ಅಂತ ಹೊರಟ ನಾನು ಖೇಚರದುರ್ಗಕ್ಕೆ ಹೋಗಿ ಸೇರಿದೆ. ನನ್ನ ಮೈಯೆಲ್ಲೋ! ಮನಸ್ಸು ಇನ್ನೆಲ್ಲೋ! ಅಲ್ಲಿಗೆ ಹೋಗಿ ಸೇರಿದ ಮೇಲೆ ಎಲಾ! ಇಲ್ಲಿಗೇಕೆ ಬಂದೆ ಅಂತ ನನಗೇ ಆಶ್ಚರ್ಯವಾಯಿತು. ಮೂರು ಮೈಲಿ ದೂರ ದಾರಿತಪ್ಪಿ ನಡೆದಿದ್ದೆ. ವರದಪ್ಪ .. ಮತ್ತೆ ಸರಿಯಾದ ದಾರಿ ಹಿಡಿದು ಹೋದೆ. ಒಂದು ಗಂಟೆ ತಡವಾಗಿ ಬಂದದ್ದಕ್ಕೆ ನನ್ನ ಚಿಕ್ಕಪ್ಪ ತರಾಟೆಗೆ ತೊಗೊಂಡರು.

ನಿನಗೆ ಗೊತ್ತಿದೆಯೋ ಇಲ್ವೋ ವರದಪ್ಪ? ಈ ಯಕ್ಷರ ಕೋಟೆ, ಗಂಧರ್ವರ ಕೋಟೆ, ಖೇಚರದುರ್ಗ, ಗರುಡನ ಬೀಡು .. ಇವನ್ನೆಲ್ಲ ಅಂದಿನ ಕಾಲದಲ್ಲಿ ಇಲ್ಲಿ ಆಳಿದ ರಾಜರೂ ಪಾಳೆಯಗಾರರೂ ಕಟ್ಟಿಸಿದ್ದಂತೆ. ಇವು ರಾಮದೇವರ ಬೆಟ್ಟ, ಲಕ್ಷ್ಮಣದೇವರ ಬೆಟ್ಟ, ಆಂಜನೇಯನ ಬೆಟ್ಟ ಇವುಗಳ ಮೇಲ್ಗಡೆ ಕಲ್ಲು ಮಣ್ಣುಗಳಿಂದ ಕಟ್ಟಿದ ಕೋಟೆಗಳು. ಕೆಲವು ಜನ ಹೇಳುತಾರೆ - ಅವೆಲ್ಲ ಪಾಳೆಯಗಾರರ ಗೋರಿಗಳು, ಅವರವರ ನಿಧಿಗಳನ್ನೂ ಅಲ್ಲಲ್ಲೆ ಹೂತಿದ್ದಾರೆ ಅಂತ. ಈ ಸಮಾಚಾರ ಹಿಂದೆ ಕಂಪೆನಿ ಸರ್ಕಾರ್ದೋರು ಇದ್ದರಲ್ಲ - ಅವರ ಕಿವಿಗೆ ಬಿದ್ದು, ಸರ್ವೆ ಮಾಡೋರು ಅಂತ ಹೆಸರಿಟ್ಟುಕೊಂಡು ಮೂರು ನಾಲ್ಕು ಗುಂಪು ಬಂದು, ಈ ಕೋಟೆಗಳಲ್ಲೆಲ್ಲಾ ಅಗೆದು ನೋಡಿಸಿದರಂತೆ. ಸಿಕ್ಕಿದ ಮಡಕೆ ಚೂರುಗಳನ್ನ ಒಂದೆರಡು ಹಿತ್ತಾಳೆ ಕಂಚಿನ ಸಾಮಾನುಗಳನ್ನ ಇವು ಚಾಲುಕ್ಯರ ಕಾಲಕ್ಕಿಂತಲೂ ಹಿಂದಿನ ನಾಗರಿಕತೆಯ ಗುರುತು ಅಂತ ಅವನ್ನ ತೆಗೆದುಕೊಂಡು ಹೋದರಂತೆ. ಆಗ ಯಕ್ಷರಕೋಟೆಯನ್ನ ಅಗೀತಿದ್ದ ಒಂದು ಗುಂಪು ಈ ಗವಿಯನ್ನು ಕಂಡು ಹಿಡಿದು ಅದನ್ನ ದೊಡ್ಡದು ಮಾಡಿಕೊಂಡು ಅಲ್ಲಿ ಅವರ ಕ್ಯಾಂಪು ಇರುವ ತನಕ ಅಲ್ಲಿಯೇ ವಾಸವಾಗಿದ್ದರು. ಈ ಗವಿ ಈಗ ಐದಾರು ವರ್ಷದ ಕೆಳಗೆ ನನ್ನ ತಂದೆಯವರ

ಕಳ್ಳಗೆ ಬಿದ್ದು, ಭಟ್ಟಿ ಇಡೋದಕ್ಕೆ ಇದೇ ಲಾಯಕ್ಕಾದ ಸ್ಥಳ ಅಂತ ಅವರು ಅಂದೇ ನಿರ್ಧರಿಸಿಬಿಟ್ಟರು.

ಭಟ್ಟಿಯ ಭಾಗಗಳನ್ನು ಒಂದೊಂದನ್ನೂ ಬೇರೆ ಬೇರೆ ಊರುಗಳಲ್ಲಿ ಮಾಡಿಸಿ ತಂದು ಜೋಡಿಸಿಕೊಂಡೆವು.

ಬೆಟ್ಟಗಳ ಮೇಲಕ್ಕೆ ಊರಿನ ಜನ ಬರುತ್ತಿರಲಿಲ್ಲ. ಅಲ್ಲೆಲ್ಲಾ ಯಕ್ಷರೂ ಗಂಧರ್ವರೂ ಬಂದಿರುತ್ತಾರೆಂದು ಜನಗಳ ನಂಬಿಕೆ ಇತ್ತು. ಆ ನಂಬಿಕೆಗಳನ್ನು ಚಿಗುರಿಸಿ ಬೆಳೆಸಿಕೊಟ್ಟವರೇ ನಾವು. ಯಾವ ಕಾಲದಲ್ಲೋ - ಹೇಳಿಕೆಯ ಮಾತು ಅದು - ಊರಲ್ಲಿ ಲಕ್ಷಣವಾಗಿದ್ದ ಹುಡುಗಿಯರಿಬ್ಬರು ಕಾಣದೆ ಹೋದಾಗ, ರಾತ್ರಿ ಯಕ್ಷರೇ ಬಂದು ಎತ್ತಿಕೊಂಡು ಹೋಗಿಬಿಟ್ಟರೆಂದು ಗುಲ್ಲೆಬ್ಬಿಸಿದರು ಊರ ಜನ. ಹೆಣ್ಣುಮಕ್ಕಳನ್ನು ಹೆತ್ತವರು ಗೋಳಾಡಿದರಂತೆ. ಆಮೇಲೆ ಆರು ತಿಂಗಳಿಗೊಮ್ಮೆಯೋ, ವರ್ಷಕ್ಕೊಮ್ಮೆಯೋ ತೌರಿನ ಉಡುಗೊರೆ ಅಂತ ಸೀರೆ, ಕುಪ್ಪಸದ ಕಣ, ಹೂವು, ಗಂಧ, ವೀಳ್ಯ ಇವೆಲ್ಲವನ್ನ ಊರಿನವರೊಡನೆ ಕೂಡಿಕೊಂಡು ತೆಗೆದುಕೊಂಡು ಹೋಗಿ, ಗಂಧರ್ವರ ಕೋಟೆಗೆ ಅರ್ಧದೂರದಲ್ಲಿದ್ದ ಬೆನಕನ ಮಂಟಪದಲ್ಲಿಟ್ಟು ಪೂಜೆ ನಡೆಸಿ, ತಮ್ಮ ಮಕ್ಕಳ ಹೆಸರನ್ನು ಹೇಳಿ 'ಇದನ್ನು ಉಟ್ಟುಕೊಳ್ಳಿ' ಅಂತ ಗಟ್ಟಿಯಾಗಿ ಕೂಗಿ ಮನೆಗೆ ಬರುತ್ತಾರೆ.

ಅಲ್ಲಿ ಭಟ್ಟಿ ಇರೋ ವಿಷಯ ನಮ್ಮ ಮೂವರಿಗೇ ಅಂದರೆ ನನಗೆ, ನಮ್ಮ ಭಟ್ಟಿಗೆ ಸಾಮಾನು ಸರಬರಾಜು ಮಾಡೋ ದೊಡ್ಡಯ್ಯ, ಸಣ್ಣಪ್ಪ ಇವರಿಗೆ ಮಾತ್ರ ಗೊತ್ತು. ಭಟ್ಟಿ ಇಳಿದ ಮಾಲನ್ನೂ ನಾವೇ ಸಾಗಿಸಿಬಿಡುತ್ತಿದ್ದೆವು. ಭಟ್ಟಿ ಇರುವ ನೆಲೆಗೆ ಎರಡು ದಾರಿಗಳಿದ್ದುವು. ಒಂದು ಬಳಸಿನ ಕಾಡುದಾರಿ. ಸಾಮಾನುಗಳು ಬಂದು ಹೋಗುವ ದಾರಿಯೂ ಅದೆ. ಇನ್ನೊಂದು ಬೆಟ್ಟಕ್ಕೆ ಹೋಗುವ ನೆಟ್ಟನೆ ದಾರಿ. ಅಲ್ಲಿ ಒಂದು ಗವಾಕ್ಷ ಇದೆ. ಅದನ್ನ ಗಾಳಿ ಬೆಳಕುಗಳಿಗಾಗಿ ಹಿಂದೆ ಸರ್ವೆ ಮಾಡಲು ಬಂದಿದ್ದ ಕಂಪೆನಿ ಗುಂಪಿನವರೇ ರಚಿಸಿಕೊಂಡಿದ್ದರು. ಆ ಗವಾಕ್ಷದಿಂದ ಒಂದು ಮರದ ಏಣಿಯ ಮೂಲಕ ಧಾರಾಳವಾಗಿ ಗವಿಯೊಳಕ್ಕೆ ಇಳಿಯಬಹುದಾಗಿತ್ತು. ಅಲ್ಲಿಯೇ ಇತ್ತು ನಮ್ಮ ಭಟ್ಟಿ.

ಈ ಗವಾಕ್ಷವನ್ನು ತೆರಕೊಂಡು ಈಚೆಗೆ ಬಂದಮೇಲೆ, ಮೇಲಿನ ನೆಲ ಯಥಾಸ್ಥಿತಿ ಕಾಣುವ ಹಾಗೆ ಮುಚ್ಚುತ್ತಿದ್ದೆವು. ಗವಾಕ್ಷದ ನೆಲೆಯೇ ಕಾಣದಂತೆ, ಅದರ ಮೇಲೆ ಮಣ್ಣು ಹಾಕಿ ಹುಲ್ಲು, ಪೊದೆ ಇವುಗಳನ್ನು ಬೆಳೆಸಿದ್ದೆವು. ಆ ಪೊದೆಯ ನಡುವೆ ಯಾರಿಗೂ ಕಾಣಬರದಂತೆ ಒಂದು ಮರದ ಗೂಟ ಇತ್ತು. ಅದನ್ನು ಜಗ್ಗಿ ಎಳೆದರೆ ಗವಾಕ್ಷವನ್ನು ತೆರೆಯುವುದಕ್ಕೆ ಆಗುತ್ತಿತ್ತು. ಈ ದಾರಿಯನ್ನು ನನ್ನ ತಂದೆಗಳು, ಚಿಕ್ಕಪ್ಪ, ನಾನು ಮೂವರು ಮಾತ್ರ ಉಪಯೋಗಿಸುತ್ತಿದ್ದೆವು.

(ಎರಡನೆಯ ಕಂತು ಮುಂದಿನ ಸಂಚಿಕೆಯಲ್ಲಿ)

ರೈ.... ಲು!

– ಬಿ.ಎಚ್. ಕುಲಕರ್ಣಿ

ರೈಲು ಹರಿದು ಹೋದ ಊರಿನಿಂದ ಬಹು ದೂರ ನಮ್ಮೂರು. ಊರಿನವರ ಪ್ರಯಾಣದ ಏಕಮಾತ್ರ ಸಾಧನವೆಂದರೆ ಕೆಂಪು ಬಸ್ಸು. ಕೆಂಪು ಬಸ್ಸನ್ನ ಅನಾದಿ ಕಾಲದಿಂದ ಬಳಸುತ್ತಿದ್ದ ನಮ್ಮೂರಿನವರು, ಈ ಪ್ರಯಾಣಕ್ಕೆ ಬೇಕಾಗುವ ರೀತಿ, ರಿವಾಜುಗಳನ್ನು ಕರತಲಾಮಲಕ ಮಾಡಿಕೊಂಡಿರುವವರಲ್ಲಿ ಅಗ್ರರು. ಬೇಕಾದಷ್ಟಕ್ಕಿಂತಲೂ ಹೆಚ್ಚಿನ ಗದ್ದಲವಿದ್ದರೂ, ಬಸ್ಸಿನಲ್ಲಿ ಸ್ಥಳ ದೊರಕಿಸಿಕೊಳ್ಳುವರು, ಬಸ್ಸಿನ ಮೇಲೆ ಹಾಕಿಕೊಂಡು ಹೋಗಲಾರದಷ್ಟು ದೊಡ್ಡ ಸಾಮಾನನ್ನು ಕಾಲ ಕೆಳಗೇ ಇಟ್ಟು ಪ್ರಯಾಣಿಸುವದು, ತಮಗೆ ಬೇಕುಬೇಕಾದಲ್ಲಿ ಬಸ್ಸನ್ನು ನಿಲ್ಲಿಸಿ, ಇಳಿಯಲು ಇಲ್ಲವೆ ಹತ್ತಲು ಅನುಕೂಲವಾಗುವಷ್ಟು ಕಂಡಕ್ಟರನೊಂದಿಗೆ ಸಖ್ಯ ಬೆಳೆಸುವದು, ಇವುಗಳಲ್ಲೆಲ್ಲಾ ನಮ್ಮೂರಿನವರು ನಿಸ್ಸೀಮರು. ಇನ್ನು ಬಸ್ಸನ್ನೇರದೇ ಬರೀ ಕಿಟಕಿಯಿಂದ ಟವೆಲ್ಲನ್ನೋ ಟೊಪ್ಪಿಗೆಯನ್ನೋ ಇಲ್ಲವೆ ವರ್ತಮಾನ ಪತ್ರವನ್ನೋ ತಮಗೆ ಬೇಕಾದ ಸೀಟಿನ ಮೇಲೆ ಗುರಿ ಇಟ್ಟು ಎಸೆದು, ಅದನ್ನು ಕಾಯ್ದಿರಿಸುವ ಚಾಕಚಕ್ಯತೆಯೋ, ಇಲ್ಲಾ, ಬಸ್ಸಿನ ಬಾಗಿಲಲ್ಲಿ ನೂಕುನುಗ್ಗಲು ಹೆಚ್ಚಾಗಿರುವ ಪ್ರಸಂಗಗಳಲ್ಲಿ ಮುಂದಿರುವವರನ್ನೆಲ್ಲ ಹಿಂದೆ ತಳ್ಳಿ ಮುಂದೆ ಹೋಗಿ ಸೀಟನ್ನು ಹಿಡಿಯುವ ವೈಖರಿಯೋ, ಬಹಳೇ ಕೌಶಲ್ಯಪೂರ್ಣವಾದದ್ದು. ಈ ಕೌಶಲ್ಯಪೂರ್ಣ ಗುರಿ ತಪ್ಪದ ಎಸೆತಗಳನ್ನು ಹಾಗೂ ವೀರಾವೇಶದಿಂದ ಮುನ್ನುಗ್ಗಿ ''ಸೀಟು ಹಿಡಿಯುವದು'' ಎಂಬ ಗುರಿ ಸಾಧಿಸುವ ಪರಿಣತಿಯನ್ನು ಗಮನಿಸಿದರೆ, ನಮ್ಮೂರಿಗೂ ಕನಿಷ್ಠ ಎಂಟ್ಹತ್ತು ಅರ್ಜುನ ಪ್ರಶಸ್ತಿಯೋ ಇಲ್ಲಾ ಪರಮವೀರಚಕ್ರವೋ ಸಿಗಬೇಕಾಗಿತ್ತು!

ಇಂಥಾ ಬಸ್ ಪ್ರಯಾಣದ ವೀರಾಧಿವೀರರೆಲ್ಲ, ರೈಲು ಪ್ರಯಾಣವೆಂದರೆ ಇಲಿ ಮರಿ! ಸಮಸ್ಯೆ ಪ್ರಾರಂಭವಾಗುವದು ಟ್ಯಾಂಟೇಬಲ್ಲಿನಿಂದಲೇ. ಅದೇ 27ಡೌನ್, 36 ಅಪ್. ಇದೂ ಒಂದು ಟೈಂ ಟೇಬಲ್ಲ - ಯಾವೋ ಒಂದೆರಡು ಅಂಕಿ ಸಂಖ್ಯೆಗಳನ್ನು ಸೇರಿಸಿ ಡೌನ್ ಇಲ್ಲಾ ಅಪ್ ಎಂದರ? ಇದರಲ್ಲಿ ಒಂದು ಊರಿನ ಹೆಸರಿಲ್ಲ, ಯಾವೂರಿನಿಂದ ಯಾವೂರಿಗೆ ಹೋಗುತ್ತದೆ ಅನ್ನುವ ಬೋರ್ಡ ಇಲ್ಲಾ, ಬಸ್ಸಿನ ಬೋರ್ಡಿನ ಮೇಲೆ 'ವ್ಹಾಯಾ' ಎಂಬಲ್ಲಿ ತಮ್ಮೂರ ಹೆಸರ ಹಾಕಿಲ್ಲಂತನ ಎಂಟು ದಿವಸ ಸ್ಟ್ರೈಕ್ ಮಾಡಿ ತಮ್ಮೂರ ಹೆಸರು ಬಸ್ಸಿನ ಬೋರ್ಡಿನ ಮೇಲೆ ರಾರಾಜಿಸುವಂತೆ ಮಾಡಿ ಕೇಕೆ ಹಾಕಿ ನಕ್ಕ ನಮ್ಮೂರಿನ ಮಂದಿಗೆ ವ್ಹಾಯಾದ ಹೆಸರೋಗ್ಲಿ, ಮುಖ್ಯವಾಗಿ ಇಂಥಾ ಊರಿನಿಂದ ಇಂಥಾ ಊರಿಗೆ ಅನ್ನುವ ಹೆಸರಾ ಇಲ್ಲದಿದ್ರ, ಇದು 'ಮಮ' ಅಂದು ಮಂತ್ರಾ ಮುಗಿಸಿದ ಲೆಕ್ಕವೇ ಆಗಿತ್ತು. ಅದೂ ಅಲ್ಲದೇ ಇಂಥಾ ರೈಲಿನ್ಯಾಗ ಅದ್ಯಾಂಗ ಮಂದಿ ಹತ್ತತಾರ, ಅದ್ಯಾಂಗ ತಮ್ಮೂರು ಬಂದದ ಅನ್ನೂದು ಗೊತ್ತಾಗಿ ಇಳಿತಾರ, ಅನ್ನೂದೇ ಒಂದು ಚಿದಂಬರ ರಹಸ್ಯ ಆಗಿತ್ತು ನಮ್ಮೂರ ಜನರಿಗೆ. ಯಾಕ ರೈಲಿನ ಮುಂದೆ ಇದು ಇಂಥಾ ಊರಿಗೆ ವ್ಹಾಯಾ ಇಂಥಾ, ಇಂಥಾ ಊರಿನ ಮ್ಯಾಲಿಂದ ಎಂದು ಬಸ್‌ನ್ಯಾಗ ಬೋರ್ಡ ಹಾಕ್ತಾರಲ್ಲಾ, ಹಾಂಗ ಯಾಕ ರೈಲಿನ ಮುಂದನೂ ಒಂದು

ಬೋರ್ಡ್ ಹಾಕಬಾರ್‍ದು ಎಂದು ರೈಲಿನಲ್ಲಿ ತಪ್ಪಿ ಒಮ್ಮೆ ಪ್ರಯಾಣಿಸಿಯೋ ಇಲ್ಲಾ ಪ್ರಯಾಣ ಮಾಡಿ ಕೇಳಿ ಗೊತ್ತಿದ್ದು ಕಟ್ಟೆಯ ಮೇಲೆ ಕುಳಿತು ಮಾತನಾಡುವ ಮಂದೀನೂ ನಮ್ಮೂರಾಗ ಕಡಿಮೆನ.

ನಾನು ಆವಾಗ ಸಣ್ಣವನಿದ್ದೆ. ಸಣ್ಣವನೆಂದರೂ ಸುಮಾರು ಐದು ಇಲ್ಲಾ ಆರನೇ ಇಯತ್ತೆ ಇರಬಹುದು. ನನ್ನ ಅಣ್ಣನ ಮದುವೆಯನ್ನು ಮಿರಜದಲ್ಲಿ ಮಾಡುವದು ನಿಶ್ಚಯವಾಗಿತ್ತು. ಮಿರಜಕ್ಕೆ ಹೋಗಬೇಕಾದರೆ, ನಮ್ಮೂರಿನಿಂದ ಕುಡಚಿಯವರೆಗೆ ಬಸ್ಸಿನಲ್ಲಿ, ಆಮೇಲೆ ಮಿರಜದವರೆಗೆ ರೈಲಿನಲ್ಲಿ ಹೋಗಬೇಕಾಗುತ್ತಿತ್ತು. ರೈಲು ಕುಡಚಿ ಸ್ಟೇಶನ್ನಿಗೆ ಎಷ್ಟು ಘಂಟೆಗೆ ಬರುವದು, ಎಷ್ಟು ನಿಮಿಷ ನಿಲ್ಲುವದು, ಎಷ್ಟು ಹೊತ್ತಿಗೆ ಮಿರಜಕ್ಕೆ ಹೋಗುವದು ಇವೆಲ್ಲಾ ನನಗೆ, ಮಿರಜಕ್ಕೆ ಹೋಗದೇ, ಆ ವಯಸ್ಸಿನಲ್ಲೇ ತಿಳಿದಿದ್ದವು. ನನಗೆ ತಿಳಿಯುವದೇನು ಬಂತು? ಊರಲ್ಲಿಯ ಬಹುತೇಕ ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಊರಲ್ಲಿ ಯಾರಾದರೂ ಮಿರಜಕ್ಕೆ ಹೋಗಿ ಬಂದರೆ, ಊರಲ್ಲಿಯ ಎಲ್ಲಾ ಮುದುಕರು, ಮಧ್ಯ ವಯಸ್ಸಿನವರು, ಚಿಕ್ಕ ಮಕ್ಕಳು ಎಲ್ಲರೂ ಅವರ ಮನೆಯಲ್ಲಿ ಅವರವರ ಯೋಗ್ಯತಾನುಸಾರದ ದೂರದಲ್ಲಿ, ಮಿರಜಕ್ಕೆ ಹೋಗಿ ಬಂದವರ ಸುತ್ತ ಕೂಡುವದು ಇಲ್ಲವೇ ಬಾಗಿಲಲ್ಲಿ ನಿಲ್ಲುವದು, ಅವರೇನು ಹೇಳುತ್ತಾರೆಂದು ತದೇಕ ಚಿತ್ತದಿಂದ ಕೇಳುತ್ತಿರುವುದು. ಹೆಚ್ಚಿನ ವೇಳೆ ಹೇಗೆ ರೈಲಿನಲ್ಲಿ ಹತ್ತಿದರು, ಹೇಗೆ ರೈಲಿನಲ್ಲಿ ಪ್ರಯಾಣಿಸಿದರು, ಹೇಗೆ ರೈಲಿನಿಂದ ಇಳಿದರು ಎಂದು ಆಸಕ್ತಿಪೂರಕವಾಗಿ ಗಲ್ಲದ ಮೇಲೆ ಕೈಯಿಟ್ಟುಕೊಂಡು ಕೇಳುವವರೇ ಹೆಚ್ಚು. ಹೇಳುವವನು ಮಾತ್ರ ಎತ್ತರದ ಮಂಚದ ಮೇಲೆಯೋ ಇಲ್ಲಾ ಕುರ್ಚಿ ಮೇಲೆಯೋ ದೊಡ್ಡದಾದದ್ದನ್ನೇನೋ ಸಾಧಿಸಿದ ಹಾಗೆ ಕುಳಿತುಕೊಂಡು ಹೇಳುತ್ತಿರುವನು. ಹೇಳುತ್ತಿರುವಾಗ ಯಾರಾದರೂ ಬಂದರೆ, ಅವರು ಹೇಳುವವನಿಗೆ ವಿನಯಪೂರ್ವಕವಾಗಿ ನಮಸ್ಕಾರಗಳನ್ನು ಮಾಡಿ ಕುಳಿತುಕೊಳ್ಳುವರು. ಆವಾಗ ಹೇಳುವವನು ಬೀಗುವನು. ಇದು ಸರ್ವಸಾಮಾನ್ಯವಾದ ದೃಶ್ಯ. ಒಟ್ಟಿನ ಮೇಲೆ ಹೇಳಬೇಕೆಂದರೆ, ಕಾಶಿಗೆ ಯಾರಾದರೂ ಹೋಗಿ ಬಂದ್ರೆ, ಸಣ್ಣ ಹುಡುಗರಿಂದ ಅವರಿಗೆ ನಮಸ್ಕಾರ ಮಾಡಿಸುತ್ತಾರಲ್ಲ, ಅದೊಂದನ್ನು ಬಿಟ್ಟು ಉಳಿದೆಲ್ಲಾ ವಾತಾವರಣ ಅದೇ ಆಗಿರುತ್ತಿತ್ತು. ಇಂಥಾ ಐದಾರು ಪಾರಾಯಣದಲ್ಲಿ ಭಾಗಿಯಾದ ನನಗೆ ರೈಲು ಕುಡಚಿಗೆ ಎಷ್ಟು ಹೊತ್ತಿನಲ್ಲಿ ಬರುವದು, ಎಷ್ಟು ಹೊತ್ತು ನಿಲ್ಲುವದು, ಎಷ್ಟು ಹೊತ್ತಿನಲ್ಲಿ ಮಿರಜಕ್ಕೆ ಹೋಗುವದು ಇತ್ಯಾದಿ, ಇತ್ಯಾದಿಗಳು ತಿಳಿಯುವದೇನೂ ಆಶ್ಚರ್ಯವಾಗಿರಲಿಲ್ಲ.

ಮಿರಜಕ್ಕೆ ಹೋಗುವ ದಿನ ಹತ್ತಿರ ಆಗುತ್ತಿತ್ತು. ದೊಡ್ಡವರು ಅಂತ ಅನ್ನಿಸಿಕೊಂಡವರೆಲ್ಲಾ ದಿನಾಲು ಒಮ್ಮೆಯಾದರೂ ತಾಕೀತು ಮಾಡುವದು ಸುರು ಆಗಿತ್ತು.

''ರೈಲು ಹೋಗು ಹೊತ್ತಿನ್ಯಾಗ, ಬರೂ ಹೊತ್ತಿನ್ಯಾಗ ಬರೇ ಎರಡು ಮಿನಟ ಸ್ಟೇಶನ್ನಿನ್ಯಾಗ ನಿಲ್ಲತದ, ಅಷ್ಟರಾಗ, ಹೆಂಗಸರೆಲ್ಲಾ, ಹುಡುಗರನ್ನೂ ಸಾಮಾನನ್ನೂ ತೊಗೊಂಡು ಇಳೀಬೇಕು. ಇಳೀದೆ ಇದ್ರೆ ಖಾಯಂ ಹೋದ್ಹಾಂಗ! ಮುಂದ ಇಳೀಲಿಕ್ಕಾಗುದಿಲ್ಲಾ. ಹೀಗೆ ಹುಡುಗರನ್ನು ಮತ್ತು ಸಾಮಾನನ್ನು ಇಳಿಸುವ ಜವಾಬ್ದಾರಿ

ತಮ್ಮದಲ್ಲೇನೋ ಅನ್ನೂ ಧಾಟಿಯಿಂದ ಪ್ರತಿಯೊಬ್ಬ ಗಂಡಸರು ಮಾತಾಡೂದು ನೋಡಿದರ ಸಣ್ಣವರಾದ ನಮಗೆಲ್ಲ ಸ್ವಲ್ಪ ಗಾಬರೀನೇ ಆಗಿತ್ತು.

ಹೋಗುವ ದಿನ ಬಂತು. ಸಾಮಾನಿನ ಗಂಟೆಲ್ಲ ತಯಾರಾಗಿದ್ದವು. ಮನೆಯ ಮುಂದಿನ ಅಂಗಳದಾಗ ಹರಡಿಕೊಂಡು ಬಿದ್ದಿದ್ದವು. ಆ ಕಡೆಯಿಂದ ಹೋಗುವವರು, ಬರುವವರು ತಾಕೀತು ಮಾಡುವರು - ಸಾಮಾನು, ಹುಡುಗರನ್ನು ಎಣಿಸ್ರಿ, ಬರೆ ಎರಡ ಮಿನಿಟ ನಿಲ್ತದ ಎಂದು.

ರಾತ್ರಿ ಕುಡಚಿ ಮುಟ್ಟಿದೆವು. ರೈಲು ಎರಡು ತಾಸು ತಡ ಆದ ಅಂತ ಹೇಳುತ್ತಿದ್ದರು. ಇವರು ಇಲ್ಲೇ ನಿಂತು ಅದ್ಯಾಂಗ ಇವರಿಗೆ ರೈಲು ಎರಡ ತಾಸ ತಡ ಆದ, ಅನ್ನೂದು ಗೊತ್ತಾಗ್ತದ ಅನ್ನೂದೇ ನನಗ ಗೊತ್ತಾಗಲಿಲ್ಲ. ನಮ್ಮ ಬಸ್ಸಿನಲ್ಲಿ ಮಾತ್ರ ಎಂದೂ ಹೀಗಾಗುವದಿಲ್ಲ. ಜಗತ್ತಿನ್ಯಾಗಿನ ಎಂಥಾ ದೊಡ್ಡ ಜ್ಯೋತಿಷಿ ಸಹಿತ, ಬಸ್ ಬತ್ತದೋ ಇಲ್ಲೋ, ಬಂದರೂ ಎಷ್ಟು ತಡಮಾಡಿ ಬರ್ತದ ಅಂತ ಹೇಳು ಧೈರ್ಯಾ ಮಾಡಿರಲಿಕ್ಕಿಲ್ಲ! ಬಸ್ಸ ಬರೂದು, ಬಿಡೂದು ಎಲ್ಲಾ ಅದಕ್ಕ ತಿಳಿದಂಗ.

ಬಹಳೇ ರಾತ್ರಿಯಾಗಿತ್ತು. ಕೆಲವು ಸಣ್ಣ ಹುಡುಗರೆಲ್ಲಾ ಮಲಗಿದ್ದರು. ಕೆಲವರು ಕುತೂಹಲದ ಕಾರಣದಿಂದ ನಿದ್ರೆ ಮತ್ತು ಎಚ್ಚರದ ನಡುವೆ ಹೊಡೆದಾಡುತ್ತ ಕುಳಿತ್ತಿದ್ದರು.ದೊಡ್ಡವರೆಲ್ಲಾ ಯಾವದೊ ಒಂದು ವಿಚಿತ್ರ ಚಿಂತೆಯಲ್ಲಿ ತುಂಬಿರುವ ಹಾಗೆ ಶತಪಥ ತಿರುಗಾಡುತ್ತಿದ್ದರು. ಒಮ್ಮೆಲೆ ಸ್ಟೇಶನ್ನಿನಲ್ಲಿ ಗದ್ದಲ ಶುರುವಾಯ್ತು. ಮಲಗಿದ್ದವರೆಲ್ಲ ಎದ್ದು ನಿಂತರು. ಸಾಮಾನುಗಳನ್ನೆಲ್ಲಾ ಒಟ್ಟುಗೂಡಿಸುತ್ತಿದ್ದರು. ನಮ್ಮನ್ನೆಲ್ಲಾ ಒಬ್ಬಿಬ್ಬರು ಎತ್ತಿ ಹಿಡಿದಿದ್ದರು. ಧಗ, ಧಗ ಶಬ್ದ ಮಾಡುತ್ತ ರೈಲು ಬಂದು ನಿಲ್ಲುವದೊಂದೇ ತಡ, ಕಿಟಕಿಯಿಂದ ನನ್ನನ್ನು ಒಳಗೆ ಎಸೆದದ್ದೇ. ಆಮೇಲೆ ಮೈಮೇಲೆ ಒಂದೆರಡು ಸಾಮಾನುಗಳು. ಏನೇನೂ ತಿಳಿಯಲಿಲ್ಲ. ಅಲ್ಲಲ್ಲಿ ಮೈ ತರಚಿಕೊಂಡಿತ್ತು. ಎರಡು ನಿಮಿಷಗಳಲ್ಲಿ ಮಾಡಬೇಕಾದ ಕೆಲಸವನ್ನು ವೀರಾವೇಶದಿಂದ ಒಂದೂವರೆ ನಿಮಿಷದಲ್ಲಿ ಮುಗಿಸಿ ದೊಡ್ಡವರೆಲ್ಲಾ ನಗುತ್ತಾ ಮೇಲೆ ಹತ್ತಿದ್ದರು. ಬಿದ್ದ ಹುಡುಗರೆಲ್ಲಾ ಮೈತುಂಬ ಗಾಯ ಮಾಡಿಕೊಂಡು ಜೋರಾಗಿ ಅಳುತ್ತಿದ್ದರು.

ಮಿರಜನ್ನು ಯಾವಾಗ ತಲುಪಿದೆನೋ ಏನೋ, ಏನೂ ಗೊತ್ತಾಗಲಿಲ್ಲ. ಮದುವೆ ಮುಗಿಸಿ ತಿರುಗಿ ರೈಲು ಹತ್ತಿ ಕುಡಚಿಗೆ ಬಂದಾಗಲೂ ರಾತ್ರಿ ಎರಡು ಘಂಟೆಯಾಗಿರುತ್ತದೆ ಎಂದು ಹೇಳಿದ್ದರು. ರೈಲು ಕುಡಚಿ ತಲುಪಿದಾಗ ಬಹುತೇಕ ನಾನು ಮಲಗಿರಬೇಕು. ಒಮ್ಮೆಲೆ ''ಸ್ಟೇಶನ್ ಬಂತು ಏಳೋ, ಏಳು'' ಎಂದಾಗಲೇ ಎಚ್ಚರ. ಕಣ್ಣು ತೆಗೆದಾಗ ರೈಲು ನಿಂತಿತ್ತು. ಕಿಡಕಿಯಿಂದ ಸಾಮಾನನ್ನು, ಹುಡುಗರನ್ನು ಯಾವ ಭೇದಭಾವವೂ ಇಲ್ಲದಂತೆ ಎಸೆಯುತ್ತಿದ್ದರು. ಯಾರೋ ನನ್ನನ್ನು ಎತ್ತಿದರು. ಹೊರಗೆ ಎಸೆದರು. ಹೊರಗೆ ಯಾರೋ ಹಿಡಿದರು; ಮತ್ತೆ ಕೆಳಗೆ ಬಿಟ್ಟರು. ಮುಂದಿನ ಸಾಮಾನು ಹಿಡಿಯಲು ಕೈ ಖಾಲಿ ಮಾಡಿಕೊಂಡರು. ಅಷ್ಟರಲ್ಲಿ ಈ ಗದ್ದಲದಲ್ಲೂ 'ಏಳು' ಎಂಬ ಎಣಿಕೆ ತೇಲಿಬಂದು ಕಿವಿಗೆ ತಲುಪಿತು. ನೋಡುತ್ತಿದ್ದ ಹಾಗೆ ಎಲ್ಲ ಸಾಮಾನು ಹಾಗೂ ಹುಡುಗರ ಗುಂಪೇ ಪ್ಲಾಟ್‌ಫಾರ್ಮ ಮೇಲೆ ಬಿದ್ದಿತ್ತು. ಹುಡುಗರೆಲ್ಲಾ ಜೋರಾಗಿ ಅಳುತ್ತಿದ್ದ ಶಬ್ದ.

ಅವರೊಂದಿಗೆ ಸೂಸಾಗಿ ಮೂವತ್ತೊಂದು .. ಮೂವತ್ತೆರಡು ಎಂಬ ಅಂಕಿಗಳು ಆವಾಗಾವಾಗ ತೇಲಿ ಬರುತ್ತಿದ್ದವು. ಎಲ್ಲರೂ ಇಳಿದರು. 'ಒಟ್ಟಾರೆ ಸಂಖ್ಯೆ ಬರೊಬ್ಬರ ಆವ' ಎಂದು ಯಾರೋ ಅಂದರು. ಅಷ್ಟರಲ್ಲಿ ರೈಲು ಹೊರಟು ಹೋಯ್ತು.

''ಅಯ್ಯೋ ರಶ್ಮಿ ಇಳಿಯಲಿಲ್ಲ'' ನನ್ನ ತಾಯಿಯ ಆಕ್ರಂದನ.

''ಅಲ್ಲೆ ಎಲ್ಲೆರೆ ಮಲಗಿರಬೇಕು ನೋಡು. ನಾ ಎಲ್ಲಾ ಎಣಿಸಿ ಇಳಿಸೀನಿ'' ಯಾರೋ ಒಬ್ಬ.

''ಇಲ್ಲಾ ಇಲ್ಲಾ, ರಶ್ಮಿ ಇಲ್ಲಾ. ಇಲ್ಲೊಂದು ಬ್ಯಾರೆ ಹುಡಿಗೆ ಅಳಕೂತ ನಿಂತದ''

''ಹಾಂಗಂದ್ರ ನನ್ನ ಎಣಿಕೆ ಬರೊಬ್ಬರ ಅದ. ಸಂದೇನು ತಪ್ಪಿಲ್ಲ''

ಆಗಿದ್ದಿಷ್ಟೇ, ರಶ್ಮಿ ಸುಮಾರು ನಾಲ್ಕು ವರ್ಷದ ಹುಡುಗಿ. ಸಾಮಾನು, ಹುಡುಗರನ್ನು ಇಳಿಸುವ ಗದ್ದಲದಾಗ ಕೈಗೆ ಸಿಕ್ಕ ಸಾಮಾನು, ಕಂಡ ಕಂಡ ಹುಡುಗರನ್ನು ಸಂಖ್ಯೆಗೆ ಸರಿಹೊಂದುವ ಹಾಗೆ ಆವೇಶದಲ್ಲಿ ಇಳಿಸಿಬಿಟ್ಟಿದ್ದರು. ಆದರಲ್ಲಿ ರಶ್ಮಿ ಬದಲಿಗೆ ಬಂದದು ಈ ಸಣ್ಣ ಹುಡುಗಿ! ಈ ಸಣ್ಣ ಹುಡುಗಿಯ ಬದಲಿಗೆ ಹೋದದ್ದು ರಶ್ಮಿ! ಹುಡುಗರಲ್ಲೇ ಹೀಗೆ ಆಗಿರಬೇಕಾದರೆ ಇನ್ನು ಸಾಮಾನಿನ್ಯಾಗ ಏನೇನು ಆಗಿತ್ತೊ ಯಾರಿಗೆ ಗೊತ್ತು. ಆಗಲೇ ಷುರು ಆಗಿತ್ತು ಸ್ಟೇಶನಿನಲ್ಲಿ ಆಕ್ರಂದನ. ರೈಲಿನ ಬಗ್ಗೆ ನನ್ನಲ್ಲಿ ಇರುವ ಕುತೂಹಲ ಕ್ರಮೇಣ ಕಡಿಮೆ ಆಗತೊಡಗಿತ್ತು. ಆಕ್ರಂದನ ಹೆಚ್ಚು ಹೆಚ್ಚು ಆದ ಹಾಗೆ, ಅಳಿದುಳಿದ ಕುತೂಹಲವು ಒಂದು ಭಯಂಕರ ಭಯವಾಗಿ ಪರಿವರ್ತನೆಗೊಳ್ಳತೊಡಗಿತ್ತು. ಅಂದೇ ಅಂದುಕೊಂಡೆ, ಮುಂದೆ ನಾನೆಂದೂ ರೈಲು ಹತ್ತುವದಿಲ್ಲವೆಂದು!



ಇ ರಾ ಕ್

ರಾ.ಶಿ. ಅವರ ಜೊತೆ

– ಪ್ರಕಾಶ್

ಅಪ್ಪ ದೇವಸ್ಥಾನಗಳಿಗೆ ಹೋಗೋದು ಬಹು ರೇರ್! ನಂ ಹೃದಯದಲ್ಲಿ ಇಲ್ಲದೇ ಇರೋ ದೇವ್ರು ಇನ್ನೆಲ್ಲಿ ಕೂತಿರ್ತಾನೆ ಅಂತ ಮನೋಭಾವ. ಒಂದು ಸಂಜೆ ಗಣೇಶನ ಗುಡಿಗೆ ನಂ ಜೊ ಬಂದರು. ಸುಮಾರು ಏಳು ಸಮಯ, ಮಂಗಳಾರತಿ ಮುಗಿಸಿಕೊಂಡು, ಪ್ರಸಾದ ತಗೊಂಡು ವಾಪಸ್ಸಾಗಬೇಕು. ಚಪ್ಪಲಿ ಹಾಕಿಕೊಳ್ಳುಕ್ಕೆ ತಡಕಾಡ್ತ ಇದ್ದರು ಅಪ್ಪ. ಫ್ರೆಂಡ್ ಒಬ್ಬರು 'ಏನ್ ಡಾಕ್ಟ್ರೆ, ನಿಂ ಚಪ್ಲಿ ಹುಡುಕ್ತಾ ಇದ್ದೀರ?' ಅಂತ (ಪೆಚ್ಚು) ಪ್ರಶ್ನೆ ಕೇಳಿದರು. ರಾ.ಶಿ. ನಸುನಗುತ್ತ 'ಇಲ್ಲ ಕಣೋ, I am Searching for the best pair!' ಅಂದ್ರು!

★★★

ನಾನು ಮೆಡಿಕಲ್ ಕಾಲೇಜ್ ಸೇರಿದ ಕಾಲ. ಅನಾಟಮಿ ಡಿಸೆಕ್ಷನ್ ಹಾಲಿನಲ್ಲಿದ್ದ ಕಳೇಬರಗಳನ್ನ ನೋಡಿ ಭಯ, ಆತಂಕ. ಈ ದೇಹಗಳೂ ಒಂದು ಕಾಲದಲ್ಲಿ ನಮ್ಮಂತೆ ನಗುತ್ತ, ಅಳುತ್ತ ಜೀವನ ಮಾಡಿದ್ದ ವ್ಯಕ್ತಿಗಳು ಅನ್ನೋ ಭಾವನೆ ಬಂದಾಗ ಡಿಸೆಕ್ಷನ್ ಮಾಡುಕ್ಕೆ ಉತ್ಸಾಹ ಕುಂದುತ್ತಿತ್ತು. ಅಪ್ಪನ ಹತ್ರ ಹೇಳಿಕೊಂಡೆ. ''ನೀನೇ ವಾಸಿ ಕಣೋ, ದಿನಾ ಹೋಗ್ತಾ ಇದೀಯ! ನಾನು ಮೆಡಿಕಲ್ ಕಾಲೇಜ್ ಸೇರಿದಾಗ ಈ ಅನಾಟಮೀನು ಬೇಡ, ಏನೂ ಬೇಡ ಅಂತ ಕಾಲೇಜ್ ಬಿಡುಕ್ಕೆ ನಿರ್ಧಾರ ಮಾಡಿದ್ದೆ ನಾನು! ಪ್ರಿನ್ಸಿಪಾಲ್ ಮನೆಗೇ ಬಂದು ಧೈರ್ಯ ಹೇಳಿ ನಾನೂ ವೈದ್ಯ ಆಗುಕ್ಕೆ ದಾರಿ ತೋರಿದರು!'' ಅಂದರು ಅಪ್ಪ!

★★★

ಆ ದಿನ ನಾನು ಮರೆಯೋ ಹಾಗೇ ಇಲ್ಲ. ಅಂದು ಬೆಳಗ್ಗೆ ಆರು ಗಂಟೆಗೆ ರಾಜರತ್ನಂ ಮನೆಗೆ ನಡೆದು ಬಂದರು. ಅಪ್ಪನ್ನ ಎಬ್ಬಿಸಪ್ಪ ಅಂದರು. ಅಪ್ಪ ಎದ್ದು ಬಂದರು. ರಾಜರತ್ನಂ ಜತೆ ಅವರ ಮನೆಗೆ ನಡೆದು ಹೋದರು. ಮನೆಗೆ ವಾಪಸ್ ಬಂದು ಸುದ್ದಿ ತಿಳಿಸಿದರು. ರಾಜರತ್ನಂ ಅವರ ಪತ್ನಿ ನಡುರಾತ್ರಿ ಕಾಲವಶರಾಗಿದ್ದರು, ಅಂದು ರಾತ್ರಿ ಅಪ್ಪ ಹೇಳಿದರು: ''ನೋಡೋ ಜಿ.ಪಿ. ಮಗು ತರಹ, ಜೀವನದ ಫಿಲಾಸಫಿ ಬಗ್ಗೆ ಅಮಾಯಕ ಅಂತ ಅಂದುಕೋತಿದ್ದೆ. ನಿನ್ನೆ ರಾತ್ರಿ ಮಡದಿ ನಿಧನರಾದರು. ಬೆಳಗ್ಗೆ ಬಂದು ಸುದ್ದಿ ತಿಳಿಸಿದ. ನಾನು ಕೇಳಿದೆ, ಜಿ.ಪಿ. ರಾತ್ರೀನೇ ಯಾಕೆ ಹೇಳಲಿಲ್ಲ? ಅಂತ. ''ಪಾಪ ದಿನವೆಲ್ಲ ಕೆಲಸ ಮಾಡಿ ಸುಸ್ತಾಗಿರ್ತೀಯ! ಬೆಳಗ್ಗೆ ಹೇಳಿದರೆ ಆಯಿತು ಅಂದುಕೊಂಡೆ'' ಅಂದ ಜಿ.ಪಿ. ನೋಡೋ, ಮಡದಿಯ ಪಕ್ಕದಲ್ಲೇ ಶಾಂತನಾಗಿ ರಾತ್ರಿ ಕಳೆದು ಬಂದಿದಾನೆ. ಅಷ್ಟು Equanimity ದೇವರು ನಮಗೂ ಕೊಡಲು ಅಂತ ಕೇಳ್ಕೋಬೇಕು ಅಷ್ಟೆ!''

★★★

ಹಾಸ್ಯಬ್ರಹ್ಮ ಟ್ರಸ್ಟ್

42, ಸುರಕ್ಷಾ ಅಪಾರ್ಟ್‌ಮೆಂಟ್, 2ನೇ ಕ್ರಾಸ್, 2ನೇ ಹಂತ,
ಗೃಹಲಕ್ಷ್ಮಿ ಬಡಾವಣೆ, ಕಮಲಾನಗರ, ಬೆಂಗಳೂರು - 560 079
ಫೋನ್: 23232849
E-mail: haasyabrahma@rediffmail.com

ಸಾಹಿತ್ಯಾಧಾರಿತ ಸದಭಿರುಚಿಯ ಹಾಸ್ಯ ಚಟುವಟಿಕೆಗಳ

ಹಾಸ್ಯಬ್ರಹ್ಮದ ಹತ್ತರ ಸಂಭ್ರಮ

ದಿನಾಂಕ: 20 ಜೂನ್ 2004

ಸಮಯ: ಬೆಳಿಗ್ಗೆ 10ಕ್ಕೆ

ಸ್ಥಳ: Indian Institute of World Culture, B.P. Wadia Road, Basavanagudi, Bangalore

ಉದ್ಘಾಟನೆ: **ಮಾಸ್ಟರ್ ಹಿರಣ್ಣಯ್ಯ**

ಮುಖ್ಯ ಅತಿಥಿ: **ಐ.ಎಂ. ವಿಠಲ ಮೂರ್ತಿ**

(ಸಾರಿಗೆ ಆಯುಕ್ತರು ಮತ್ತು ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ)

ಗೌರವಾರ್ಪಣೆ:

ಬಾಗೂರು ಚಂದ್ರು - ಹಾಸ್ಯ ಲೇಖಕರು

ಎಂ.ಪಿ. ಮನೋಹರಚಂದ್ರನ್ - ಹಾಸ್ಯ ಲೇಖಕರು

ವಿ.ಜಿ. ನರೇಂದ್ರ - ವ್ಯಂಗ್ಯ ಚಿತ್ರಕಾರರು

ಕು. ರಶ್ಮಿ ಹೆಬ್ಬೂರು - ಸಂಪಾದಕಿ - ನಗೆ ಮುಗುಳು

ಅಧ್ಯಕ್ಷತೆ:

ಪ್ರೊ॥ ಅ.ರಾ. ಮಿತ್ರ

ಮನರಂಜನೆ:

ಗಾನ ವಿನೋದಿನಿ ತಂಡದಿಂದ

ಸರ್ವರಿಗೂ ಆದರದ ಸ್ವಾಗತ

ಕೋರಮಂಗಿ ಅಪರಂಜಿ ಟ್ರಸ್ಟ್ ಹಾಸ್ಯಬ್ರಹ್ಮ ಟ್ರಸ್ಟ್

ಹಾಸ್ಯೋತ್ಸವ ವಿ.ಸಿ.ಡಿ.ಗಳು

1. ರಾ.ಶಿ. ರತ್ನ ಸಂಸ್ಮರಣೆ - ಹಾಸ್ಯೋತ್ಸವ 98 (ಬೆಲೆ ರೂ. 150/-)

2. ಬೀಚಿ ಸಂಸ್ಮರಣೆ - ಹಾಸ್ಯೋತ್ಸವ 99 (ಬೆಲೆ ರೂ. 150/-)

3. ದಾಶರಥಿ ದೀಕ್ಷಿತ್ ಸಂಸ್ಮರಣೆ-ಹಾಸ್ಯೋತ್ಸವ 2K2 (ಬೆಲೆ ಎರಡು ಸಿ.ಡಿ.ಗಳ ಒಂದು ಜೊತೆಗೆ ರೂ. 300/-)

4. ವೈಯೆನ್ಕೆ - ಟೀಯೆಸ್ಸಾರ್ ಸಂಸ್ಮರಣೆ - ಹಾಸ್ಯೋತ್ಸವ 2K3(ಬೆಲೆ ಎರಡು ಸಿ.ಡಿ.ಗಳ ಒಂದು ಜೊತೆಗೆ ರೂ. 300/-) ಇದೀಗ ಮಾರಾಟಕ್ಕೆ ಸಿದ್ಧವಾಗಿವೆ.

ನಿಮಗೆ ಹತ್ತಿರವಾದ ವಿಳಾಸಕ್ಕೆ ಭೇಟಿ ನೀಡಿ ಸಿ.ಡಿ. ಪಡೆಯಬಹುದು.

ವಿ.ಸಿ.ಡಿ. ಲಭ್ಯವಿರುವ ವಿಳಾಸಗಳು

ಮಲ್ಲೇಶ್ವರಂ

ಶ್ರೀ ಎಂ. ಶಿವಕುಮಾರ್
ನಂ. 36, 6ನೇ ಮುಖ್ಯರಸ್ತೆ
ಮಲ್ಲೇಶ್ವರಂ, ಬೆಂಗಳೂರು - 560 003
ದೂರವಾಣಿ: 23345259

ಶ್ರೀ ಎ.ಆರ್. ರಾಜಗೋಪಾಲ್
ನಂ. 65, ''ಚಿನ್ಮಯ'' 11ನೇ ಮೇನ್ ರಸ್ತೆ
ಮಲ್ಲೇಶ್ವರಂ, ಬೆಂಗಳೂರು - 560 003
ದೂರವಾಣಿ: 23347300

ರಾಜಾಜಿನಗರ

ರವಿ ಗ್ರಾಫಿಕ್ಸ್
ನಂ. 60/2 ಎರಡನೇ ಮೇನ್
ಇಂಡಸ್ಟ್ರಿಯಲ್ ಟೌನ್, ರಾಜಾಜಿನಗರ
(ಶಿವಪ್ರಭ ಕಲ್ಯಾಣಮಂಟಪದ ಹಿಂದೆ)
ಬೆಂಗಳೂರು - 560 044
ದೂರವಾಣಿ: 23305999

ಸುಬ್ಬಯ್ಯ ಸರ್ಕಲ್

ಒಮೇಗಾ ಲೇಸರ್‌ಟೆಕ್
ನಂ. 17, ಮಿಷನ್ ರಸ್ತೆ
ಸುಬ್ಬಯ್ಯ ಸರ್ಕಲ್ (ಕಾರ್‌ಕೆಂಪ್ ಮೇಲೆ)
ಬೆಂಗಳೂರು - 560 027
ದೂರವಾಣಿ: 22225633

ಕಮಲಾನಗರ

ಶ್ರೀ ಕೃಷ್ಣ ಸುಬ್ಬರಾವ್
ನಂ. 42, ''ಸುರಕ್ಷಾ'' 2ನೇ ಅಡ್ಡರಸ್ತೆ
2ನೇ ಹಂತ, ಗೃಹಲಕ್ಷ್ಮಿ ಲೇಔಟ್
ಕಮಲಾನಗರ, ಬೆಂಗಳೂರು - 560 079
ದೂರವಾಣಿ: 23232849

ಗಿರಿನಗರ

ಶ್ರೀ ವೈ.ಎನ್. ಗುಂಡೂರಾವ್
ನಂ. 683, ''ಸೌರಭ''
13ನೇ ಕ್ರಾಸ್ ರಸ್ತೆ, 2ನೇ ಹಂತ
ಗಿರಿನಗರ, ಬೆಂಗಳೂರು - 560 085
ದೂರವಾಣಿ: 26722731

ಬನಶಂಕರಿ (ಮೊದಲ ಹಂತ)

ಶ್ರೀ ಜಿ. ನಾಗೇಶ್
ನಂ. 419, 2ನೇ ಮುಖ್ಯ ರಸ್ತೆ
ವಿದ್ಯಾಪೀಠ ಲೇಔಟ್
ಚೆನ್ನಮ್ಮನಕೆರೆ, ಟಿ.ಆರ್. ನಗರ
ಬೆಂಗಳೂರು - 560 028
ದೂರವಾಣಿ: 56684051

ವಿ.ಐ.ಪಿ. ಅತಿಥಿ

– ಕಮಲಾ ರಾಮಸ್ವಾಮಿ

ಬೆಳಿಗ್ಗೆಯಿಂದ ಒಂದೇ ಸಮ ಕೆಲಸವಾಗಿತ್ತು. ಮನೆ ಒಳಗೆ ಹೊರಗೆ ಸುತ್ತಮುತ್ತ ಎಲ್ಲಾ ಕಡೆ ಕ್ಲೀನ್ ಮಾಡಿ ಸಾಕಾಗಿತ್ತು. ಹಾಯಾಗಿ ಎರಡು ನಿಮಿಷ ಕೂತು ಸುಧಾರಿಸಿಕೊಂಡು, ಆಮೇಲೆ ಅಡಿಗೆ ಮಾಡಿದರೆ ಆಯ್ತು ಎಂದು ಕೂತೆ. ವಿವಿಧಭಾರತಿ ಹಾಕಿ, ಕಾಲು ನೀಡಿಕೊಂಡ ತಕ್ಷಣ ದೂರವಾಣಿ ಕರೆಯಿತು. ಗೆಳತಿಯರಿರಬೇಕು ಎಂದುಕೊಂಡೆ! ಆದರೆ ಅದು ನಮ್ಮವರಿಂದ - ಅದೂ ತುರ್ತಾಗಿ! ನಂ ಎಂ.ಡಿ. ಸಾಹೇಬರು ಪತ್ನೀಸಮೇತರಾಗಿ ಬಂದಿಳಿದಿದ್ದಾರೆ. ಬೆಲಡಿಲಾ ಗೆಸ್ಟ್‌ಹೌಸ್‌ನಲ್ಲಿ ಇದ್ದಾರೆ. ರಾತ್ರಿ ಊಟಕ್ಕೆ ಅರೇಂಜ್ ಮಾಡಬೇಕು. ನಮ್ಮ ಸಿನ್ಹಾ, ತಿವಾರಿ ಜೊತೆಗೆ ಬರ್ತಾರೆ. ಎಂ.ಡಿ.ಯವರ ಹೆಂಡತಿ ಜರ್ಮನ್. ನಿನಗೆ ಗೊತ್ತಿದೆ, ಆದ್ರೂ ಜ್ಞಾಪಿಸಿದೆ - ನಿಧಾನವಾಗಿ ವಿವರಣೆ ಕೊಟ್ಟರು. ತಕ್ಷಣ ಜಮಾಲ್‌ನ ಕಳುಹಿಸಿ. ಹೀಗೆ ದಿಢೀರ್ ಅತಿಥಿಗಳು ಬಂದ್ರೆ ಹೇಗ್ಮಾಡ್ಬೇಕು ಅಂದೆ. ಅದು ನಿನ್ನ ಜವಾಬ್ದಾರಿ ಡಾರ್ಲಿಂಗ್.


ಮಧ್ಯಪ್ರದೇಶದ ಬಸ್ತಾರ್‌ನಲ್ಲಿದ್ದ ಬೆಲಡಿಲಾ ಐರನ್ ಓರ್ ಪ್ರಾಜೆಕ್ಟಿಗೆ ಸಮೀಪದಲ್ಲಿದ್ದ ಕುಗ್ರಾಮದಲ್ಲಿ ನಮ್ಮ ಕಂಪನಿಯ ಬೀಡು. ಸಣ್ಣ ಕಾಲೋನಿಯಾದ್ದರಿಂದ ಯಾವ ದೊಡ್ಡ ಅಧಿಕಾರಿ ಬಂದರೂ ನಮ್ಮ ಮನೆಯಲ್ಲೇ ಆತಿಥ್ಯ, ಸತ್ಕಾರ. ಹೀಗಾಗಿ ಕಂಪನಿಯ ಎಂ.ಡಿ. ಅಮೇರಿಕೆಯಿಂದ ಬಂದರೆಂದ ಮೇಲೆ ನನ್ನ ಪಾಡು ಹೇಗಿರಬೇಕು! ಆತ ಭಾರತೀಯ, ಹೆಂಡತಿ ಜರ್ಮನ್, ಅಷ್ಟೇ ವಿಷಯ ನನಗೆ ತಿಳಿದಿದ್ದು.

ಜಮಾಲ್ ಬಂದ ಕೂಡಲೆ ಆಕೆಗಾಗಿ ಖಾರ, ಮಸಾಲೆಯಿಲ್ಲದ ನಾನ್‌ವೆಜ್ ಅಡಿಗೆ ಮಾಡಿಡಲು ಹೇಳಿದೆ. ನಾವಿದ್ದ ಜಾಗ ಕಾಡಿನ ಅಂಚಿನಲ್ಲಿತ್ತು. ಆರಾಮ ಜೀವನ, ನಿಸರ್ಗದ ರಮ್ಯತೆಗೆ ಹೇಳಿ ಮಾಡಿಸಿದಂತಿದ್ದ ಹಳ್ಳಿ. ಆದರೆ ಒಂದು ಹೋಟಲ್, ಬೇಕರಿ, ತರಕಾರಿ ಮಾರ್ಕೆಟ್ ಯಾವುದೂ ಇಲ್ಲ. ಮನೆಯಲ್ಲಿದ್ದ ಸಾಮಾನಲ್ಲಿ ಏನು ಮಾಡಬಹುದೆಂದು ಯೋಚಿಸುತ್ತಾ ಕಾಲೆಳೆದುಕೊಂಡು ಅಡಿಗೆ ಮನೆಗೆ ಹೊರಟೆ. ಸಂಜೆ ಏಳು ಗಂಟೆಯ ಹೊತ್ತಿಗೆ ಅಡಿಗೆ, ಕೆಲಸ ಎಲ್ಲಾ ಮುಗಿದು, ಊಟದ ಮೇಜಿನ ಮೇಲೆ ಜೋಡಿಸುವ ಕೆಲಸವೂ ಮುಗಿಸಿದೆ. ಜಮಾಲ್ ತನ್ನ ಅಡಿಗೆ ತಯಾರಾಗಿದೆ ಎಂದು ಫೋನ್ ಮಾಡಿದ್ದ. ಅತಿಥಿಗಳ ಆಗಮನವನ್ನೇ ಇದಿರು ನೋಡುತ್ತಾ ಕುಳಿತೆ. ಏಳೂವರೆಗೆಲ್ಲಾ ಜೀಪ್ ಬಂದೇಬಿಟ್ಟಿತು. ಸಿನ್ಹಾ, ತಿವಾರಿ ಒಳಗೆ ಬಂದು ಏನಾದರೂ ಸಹಾಯ ಬೇಕೆ ಎಂದು ಕೇಳಿ ಸೌಜನಿಕೆ ತೋರಿಸಿದರು. ಅಷ್ಟು ಹೊತ್ತಿಗೆ ಬಾಗಿಲಿಗೆ ಬಂದ ಎಂ.ಡಿ. ಅವರನ್ನು ಇವರೇ ಎಸ್.ಎಸ್. ಮೇಲ್ಕೋಟ್, ನಂ ಕಂಪನಿಯ ಮುಖ್ಯಸ್ಥರು, ಎಂದು ನಮ್ಮವರು ಪರಿಚಯಿಸಿದರು. ನಮಸ್ತೇ ಎಂದೆ. ಹೇಗಿದ್ದೀರಾ; ಈ ನಾಲ್ಕು ಮನೆ ಹಳ್ಳಿ ಜೀವನ ಕಷ್ಟ ಅನ್ಸೋಲ್ವೆ. ಅಚ್ಚ ಕನ್ನಡದಲ್ಲಿ ಮಾತನಾಡಿದರು. ಇದೂ ಒಂದು

ಅನುಭವ ಎಂದೆ. ನಿಮ್ಮ ಮಿಸೆಸ್ಸ್ ಬರಲಿಲ್ಲವೇ ಎಂದೆ. ಅವನ್ನು ಕರೆತರಲು ಜೀಪ್ ಹೋಗಿದೆ ಎಂದರು. ಮೈಸೂರಿನ ಶಾಮಸುಂದರ್ ಮೇಲುಕೋಟೆ, ಓದಿದ್ದು, ಬರೆದಿದ್ದೆಲ್ಲಾ ಮೈಸೂರಿನಲ್ಲೇ. ಆನಂತರ ಅಮೇರಿಕಾಗೆ ಹೋಗಿ ನೆಲಸಿದರಂತೆ. ಎತ್ತರಕ್ಕೆ ತಕ್ಕ ದಪ್ಪ, ವಿದೇಶಿಯರಂತೇ ಮೈಬಣ್ಣ. ಜಂಭ, ಗತ್ತು ಯಾವುದೂ ಇಲ್ಲದ ಸರಳ ಸ್ವಭಾವ ಕಂಡು ಮೆಚ್ಚಿಕೆ ಆಯಿತು. ಮೈಸೂರಿನ ಅಡಿಗೆ ಮಾಡಿದ್ದೀರಾ ತಾನೇ. ಬಹಳ ದಿನ ಆಗಿವೆ ಆ ಊಟ ಮಾಡಿ ಎಂದರು.

ಅಷ್ಟರಲ್ಲೇ ಆಕೆಯನ್ನು ಕರೆತರಲು ಹೋದ ಜೀಪ್ ಬಂತು. ಬಾಗಿಲಿಗೆ ಹೋಗಿ ಸ್ವಾಗತ ಕೋರಿದೆ. ಗಂಡನಿಗೆ ತಕ್ಕ ಹೆಂಡತಿ. ಎತ್ತರದ ನಿಲುವಿನ ಸುಂದರ ಮೈಕಟ್ಟಿನ ಚಲುವೆ. ಪಂಜಾಬಿ ಉಡುಪು ಆಕೆಗೆ ತುಂಬಾ ಒಪ್ಪಿತ್ತು. ಪರಸ್ಪರ ಪರಿಚಯವಾದ ನಂತರ, ಶಿಷ್ಟಾಚಾರದ ಉಪಚಾರದ ನಡೆದ ಮೇಲೆ, ಅಡಿಗೆ ಬಿಸಿ ಮಾಡಲು ಎದ್ದೆ. ಆಕೆಯೂ ಹಿಂದೆ ಬಂದರು. ನಮ್ಮವರೂ ಬಂದು ಜಮಾಲ್ ಬಂದನೇ, ಅವನಿಗೂ ಅಡಿಗೆ ಬಿಸಿ ಮಾಡಲು ಹೇಳು, ಹಾಗೆ ಪಕ್ಕದ ಟೇಬಲ್ ಮೇಲೆ ಇಡುವಂತೆ ಹೇಳು. ತಿವಾರಿ ಶಾಖಾಹಾರಿ ಎಂದರು.

ಆಕೆ ಮೆಲುದನಿಯಲ್ಲಿ ಶ್ರೀಧರ್ ನಾನೂ ಶಾಖಾಹಾರಿ ಎಂದು ಕನ್ನಡದಲ್ಲಿ ಹೇಳಿದಾಗ ನಾವಿಬ್ಬರೂ ಬೆಚ್ಚಿಬಿದ್ದೆವು. ನಮ್ಮ ಗಾಭರಿ ಕಂಡು ಈಕೆ ನಗುತ್ತಾ, ನಾನು ಹುಟ್ಟಿ ಬೆಳೆದಿದ್ದೆಲ್ಲಾ ಹಾಸನದಲ್ಲಿ, ನಮ್ಮ ತಂದೆ ತಾಯಿ ಅಲ್ಲಿನ ಕ್ರಿಶ್ಚಿಯನ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಮಿಷಿನರಿ ಆಸ್ಪತ್ರೆಯ ಸೇವೆಯಲ್ಲೇ ಅವರು ನಲವತ್ತು ವರ್ಷ ಕಳೆದರು. ಹಾಗಾಗಿ ನನಗೆ ಕನ್ನಡ ಬರುವಷ್ಟು ಚೆನ್ನಾಗಿ ಇಂಗ್ಲೀಷ್ ಬಾರದು. ಜರ್ಮನ್ ಭಾಷೆ ನನಗೆ ತಿಳಿಯದು, ಎಂದಾಗ ಸದ್ಯ ಆಕೆ ಎದುರು ನಾವು ಕನ್ನಡದಲ್ಲಿ ಇನ್ನೇನೂ ಆಡಲಿಲ್ಲವಲ್ಲ ಎಂದ್ಕೊಂಡೆವು.



ನಿಮ್ಮ ಪತ್ರಗಳು

ಮಾನ್ಯ ಸಂಪಾದಕರಿಗೆ,

ಮೊನ್ನೆ ಮೊನ್ನೆ ತಾನೆ ಇಪ್ಪತ್ತು ತುಂಬಿದ ಅಪರಂಜಿ, ಮೇ ತಿಂಗಳ ಸಂಚಿಕೆಯಲ್ಲಿ ತನ್ನ ಪ್ರೌಢತೇನ ಚೆನ್ನಾಗಿ ಬಿಂಬಿಸಿದ್ದಾಳೆ ಅನ್ನಿಸುತ್ತ. ಆ ಖುಷಿ ಹಂಚಿಕೊಳ್ಳೋಕ್ಕೆ ಈ ಕಾಗದ ಬರೀತಿದೀನಿ.

ಕಳೆದ ಹಲವಾರು ತಿಂಗಳುಗಳಿಂದ ಬರುತ್ತಿರುವ ''ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ'' ಮಾಲೆ, ಇಲ್ಲೀವರೆಗೂ ಎಂದೂ ನಿರಾಶೆಗೊಳಿಸಿಲ್ಲ. ಈ ಬಾರಿಯಂತೂ, ಜೇಮ್ಸ್ ಥರ್ಬರನ ''ಮಿಸ್ ಗ್ರೋಬಿ....'' ನಮ್ಮ ಸ್ಕೂಲು ದಿನಗಳಲ್ಲಿ - ಕೈಯಲ್ಲಿ ಯಾವಾಗಲೂ ''ರೆನ್ ಅಂಡ್ ಮಾರ್ಟಿನ್'' ಗ್ರಾಮರ್ ಪುಸ್ತಕಾನ ಝಳಪಿಸ್ತಾ ಬಂದು ನಮ್ಮ ಪ್ರಾಣ ಹಿಂಡುತ್ತಿದ್ದ (ಅಂತ ಆಗ ನಾವು ಭಾವಿಸಿದ್ದ) ಟೀ.ಆರ್.ಎಸ್. ಮೇಷ್ಟ್ರನ್ನ ನೆನಪಿಸಿತು.

ಇನ್ನು ಎಲ್ಲರ ಮನೇಲೂ ಸರ್ವೇ ಸಾಧಾರಣವಾದ ಪಲಾವು, ಬಿಸಿಬೇಳೆ ಭಾತ್, ಜಿಲೇಬಿ ಇತ್ಯಾದಿಗಳ ವಿಷಯ ಕೇವಲ ತಿಂಡಿಪೋತರಿಗೆ, ಇಲ್ಲ ಪಾಕಶಾಸ್ತ್ರ ಪ್ರವೀಣ(ಣೆಯ)ರಿಗೆ ಮಾತ್ರ, ಸರಿ ಅಂತ ಅನ್ಕೊಂಡಿದ್ದು ತಪ್ಪಾಯ್ತು. ಇವು ಕೂಡಾ ಸಮರ್ಥ ಬರಹಗಾರನ ಲೇಖನಿಯಿಂದ ಮೂಡಿ ಬಂದರೆ, ''ವಸಂತ ಪುರದಲ್ಲೊಂದು ಸಂಜೆ''ಯಂತಹ ವಿಶಿಷ್ಟ ಬರಹದ ರಚನೆಗೆ ಕಾರಣವಾಗುತ್ತೆ ಅಂತ ತಿಳಿಯಿತು. ''ದತ್ತನ ಧಂಧೆ'' ಯಲ್ಲಿ - ಬೆಂಗಳೂರಿನ ನಿವಾಸಿಗಳಿಗೆಲ್ಲಾ ತಿಳಿದರಲೇ ಬೇಕಾದ ಭಾಷೆಯ ಬಗ್ಗೆ ತುಂಬಾ ಸೂಕ್ಷ್ಮವಾಗಿ ತಿಳಿಸಿರೋದು ನೋಡಿ ಸಂತೋಷವಾಯ್ತು. ಅಲ್ಲದೇ ಕಂಗ್ಲೀಷ್ ಮಾತ್ರ ಬರೋ ನಮ್ಮಂಥೋರಿಗೆ ಈ ಲೇಖಕರು ಬಳಸಿರೋ ಭಾಷೆ ಏಕ್‌ದಂ ಫಾಂಟಾಸ್ಟಿಕ್. ಗಾಲ್ಫ್‌ನಂತಹ ಒಂದು ''ಅಮದಾದ ಕ್ರೀಡೆ'' ನಮ್ಮ ದೇಶದಲ್ಲಿ ಇದ್ದಿರಬಹುದಾದ ಬಗ್ಗೆ ರೀಸರ್ಚ್ ಮಾಡಿ, ನಾವು ಭಾರತೀಯರು, ಎಲ್ಲದರಲ್ಲೂ 'ಪಯನೀರ್ಸು'' ಅಂತ ''ಪ್ರಾಚೀನ ಭಾರತದಲ್ಲಿ....'' ಲೇಖನದಲ್ಲಿ ಅಂಕಿ ಅಂಶಗಳಿಂದ ತಿಳಿಸಿದ್ದಾರೆ. ಇಂಥಾ ಸಂಶೋಧನೆಗಳು, ಸಂಶೋಧಕರು ನಮ್ಮ ಮೊರೇಲ್‌ಗೆ ಅತ್ಯಾವಶ್ಯಕ.

ಹಾಗೇ ದಾಸರು ಈ ಕಾಲದಲ್ಲಿ ಇದ್ದಿದ್ರೆ ಖಂಡಿತಾ ಕ್ಷಮಿಸಿರುತ್ತಿದ್ರು ಅಂತ ಅನ್ನಿಸುವ ''ಉದರ ವಿವೇಕ''ದ ಝೆರಾಕ್ಸ್ ಪ್ರತಿಗಳನ್ನ ನಮ್ಮ ರಾಜಕಾರಣಿಗಳಿಗೆ ಮರೀದೆ ಕಳಿಸೀಪ್ಪ, ಪುಣ್ಯ ಬರತ್ತೆ.

ಇದಿಷ್ಟೇ ಅಲ್ಲ. ಈ ಸಲ ಅಪರಂಜಿ ಇಬ್ಬರು ಅಮೆರಿಕನ್ನಡಿಗರನ್ನ ಪರಿಚಯಿಸಿ, ಗ್ಲೋಬಲ್ ಆಗೋ ಸೂಚನೆಗಳನ್ನ ತೋರಿಸ್ತಿದ್ದಾಳೆ ಅನ್ನಿಸ್ತು. ಬುಷ್‌ನ ತವರಿನಿಂದಲೇ ಅವನ ಸಮರ ನೀತಿಯನ್ನ ನಟರಾಜ್ ಅವರು ಕುಮಾರವ್ಯಾಸನ ಶೈಲಿಲೀ ಹೇಳಿರೋದು ತುಂಬಾ ಖುಷಿ ಕೊಟ್ಟಿತು. ಇನ್ನೊಬ್ಬ ಕನ್ನಡಿಗ ಜನಾರ್ಧನ ಸ್ವಾಮಿಯವರ ವ್ಯಂಗ್ಯ ಚಿತ್ರಗಳಂತೂ ತೀರ ಮುದ್ದಾಗಿವೆ. ದಿವಂಗದ ರಾಮಮೂರ್ತಿಯವರನ್ನ ಸ್ಮರಿಸಿರುವ ರೀತಿ, ಅತ್ಯಂತ ಸೂಕ್ತವಾದ ನಮನ. ವೆಲ್‌ಡನ್ ಸಂಪಾದಕರೇ ಕೀಪಿಟಪ್.

- ವಾಣಿ, ಮೈಸೂರು

ಮಾನ್ಯ ಸಂಪಾದಕರಿಗೆ,

ಸನ್ಮಾನ್ಯ ಶ್ರೀ ಎ.ಎಸ್. ರಾಮಕೃಷ್ಣ ಅವರು 'ಗಮಾರ' ಕಾವ್ಯನಾಮ ಬಳಸಿದ್ದನ್ನು ತಿಳಿಯದೆ ನಾನು ಉಪಯೋಗಿಸಿದೆ. ಇದಕ್ಕಾಗಿ ಅವರ ಕ್ಷಮೆಯಿರಲಿ.

ಇನ್ನು ಮುಂದೆ ಇಂತಹ ಪ್ರಮಾದಕ್ಕೆ ಎಡೆಗೊಡುವುದಿಲ್ಲವೆಂದು ಶ್ರೀಯುತರಿಗೆ ಆಶ್ವಾಸನೆ ನೀಡುತ್ತೇನೆ.

ವಂದನೆಗಳು,

- ಎಸ್. ರಾಮಮೂರ್ತಿ

(ಎಸ್ರಾಮ್ಮೂರ್ತಿ)

ಸ್ವಯಂ ನಿವೃತ್ತಿ

- ಎಚ್. ಗೋಪಾಲಕೃಷ್ಣ

ಮೊನ್ನೆ ನಮ್ಮ ಮೈಸೂರು ಎಕ್ಸ್‌ಪ್ರೆಸ್ಸು ಜಾವಗಲ್ ಶ್ರೀನಾಥ ಕ್ರಿಕೆಟ್ಟಿನಿಂದ ನಿವೃತ್ತಿ ಘೋಷಿಸಿದ ನೋಡೀ ಆಗಲೇ ನನಗೆ ನನ್ನ ಹಳೆ ಗೆಳೆಯ ಒಬ್ಬ ತನ್ನ ಆಟದಿಂದ ನಿವೃತ್ತಿಯನ್ನ ಸ್ವಂತವಾಗಿ ಘೋಷಿಸಿಕೊಂಡ ನೆನಪು ಬಂದಿದ್ದು. ಈಗ ಆ ವಿಷಯಕ್ಕೆ ಬರಲೇ? ಅದಕ್ಕೆ ಮೊದಲು ಕೊಂಚ ಹಿನ್ನೆಲೆಯನ್ನೂ ನಿಮಗೆ ಹೇಳೇ ಬಿಡ್ತೀನಿ! ಹೇಳೀ ಕೇಳೀ ನಾನು ನಿಮಗೆ ಕ್ರಿಕೆಟ್ಟಿನ ನಿವೃತ್ತಿಯ ಬಗ್ಗೆ ಹೇಳುತ್ತಲಿಲ್ಲ - ಬದಲಿಗೆ ಇದು ಅಂದರೆ ಈಗ ನಾನು ಹೇಳಲು ಹೊರಟಿರುವುದು ಮತ್ತೊಂದು ರೀತಿಯ ಆದರೆ ಕ್ರಿಕೆಟ್ಟಿನಷ್ಟೇ ಅಮಲು ಏರಿಸುವಂಥಹಾ ಮತ್ತೊಂದು ಕ್ರೀಡೆ - ಕ್ರೀಡೆ ಅನ್ನಿ ಅಥವಾ ಹವ್ಯಾಸ ಅನ್ನಿ - ಅದರ ಬಗೆಗೆ.

ಕ್ರಿಕೆಟ್ಟಿನಂತಹ ಅಮಲು ಏರಿಸುವ ಕ್ರೀಡೆ ಮತ್ತೆ ಯಾವುದಿದೆ ಅಂತ ನೀವು ದಯವಿಟ್ಟು ತಲೆ ಕೆಡಿಸಿಕೊಳ್ಳಬೇಡಿ. ಕ್ರಿಕೆಟ್ಟು ಆಡುವವರಿಗೆ ನೋಡುವವರಿಗೆ ಇರುವ ರೀತಿಯ ಆಸಕ್ತಿಯಂತೆಯೇ ಮತ್ತೊಂದು ಗುಂಪು ಸಹ ಇದೆ - ಆ ಗುಂಪಿಗೂ ಸಹ ಇದೆ ರೀತಿಯ ಅಮಲು ಏರುತ್ತಿರುತ್ತೆ ಅಂತ ವಿವರಣೆ ನೀಡಿ ಈಗ ನಿಮ್ಮನ್ನ ವಿಷಯಕ್ಕೆ ಕರೆದುಕೊಂಡು ಹೋಗಲೇ ...

ನಿಮಗೆ ನಮ್ಮ ರಂಗಣ್ಣನ ವಿಷಯ ಹೇಳಿದ್ದೀನಾ? ಈ ತನಕ ಆತನ ವಿಷಯ ನಿಮಗೆ ನಾನು ಹೇಳೇ ಇಲ್ಲ ಅಂದರೆ ದಯವಿಟ್ಟು ನನ್ನನ್ನ ನೀವು ಕ್ಷಮಿಸಲೇ ಬೇಕು. ಹಾಗೆ ನೋಡಿದರೆ ಈ ರಂಗಣ್ಣನ ಸಂಗತಿ ನನ್ನ ಗೆಳೆಯರೆಲ್ಲರ ಮೊದಲು ನಿಮಗೆ ತಿಳಿದಿರಬೇಕಾದಂತಹ ಸಂಗತಿ. ನಮ್ಮ ರಂಗಣ್ಣ ಒಂದು ರೀತಿಯಲ್ಲಿ ಸಭ್ಯ ಮತ್ತು ಸುಸಂಸ್ಕೃತ. ಹೀಗಂದರೆ ಏನು ಅಂತ ನಿಮಗೆ ತಿಳಿದಿರಬೇಕು - ಹಿಂದೆ ಬಂದರೆ ಒದೆಯದ ಮತ್ತು ಮುಂದೆ ಬಂದರೆ ಹಾಯದ ವ್ಯಕ್ತಿಗಳಿಗೆ ಹೀಗೆ ಹೇಳುತ್ತಾರೆ! ಅಂದರೆ ಇನ್ನೂ ವಿಶದವಾಗಿ ಹೇಳಬೇಕೆಂದರೆ ಈತ ತನ್ನ ಪಾಡಿಗೆ ತನ್ನ ಓದು, ತನ್ನ ಬರಹ, ತನ್ನ ಸಾಹಿತ್ಯ ಸೇವೆ ಇತ್ಯಾದಿಗಳನ್ನು ಮಾಡಿಕೊಂಡು ಯಾರಿಗೂ ಉಪದ್ರವ ನೀಡದೆ ಇದ್ದದ್ದರಲ್ಲೇ ಸಂತೃಪ್ತನಾಗಿದ್ದಂತಹ ವ್ಯಕ್ತಿ. ಅದು ಯಾವ ವಿಷಗಳಿಗೆಯಲ್ಲೋ ಈತನಿಗೂ ಸಹ ತಾನು ಬರೆದದ್ದು ಪತ್ರಿಕೆಗಳಲ್ಲಿ ಬರಬೇಕು, ಜನ ತನ್ನ ಬಗ್ಗೆ ವಿಚಾರ ಸಂಕಿರಣಗಳನ್ನು ಮಾಡಬೇಕು, ತನ್ನ ಬರಹಗಳು ಯೂನಿವರ್ಸಿಟಿಯಲ್ಲಿ ಪಠ್ಯಗಳಾಗಬೇಕು. ಮೊದಲಾದ ಶ್ರೀಸಾಮಾನ್ಯರಿಗೆ ಅನ್ನಿಸದ ವಿಚಾರಗಳು ಬಂದು ಈತನ ತಲೆ ಎಂಬುವ ಮಹಾಗೊಂಡಾರಣ್ಯದಲ್ಲಿ ಬೇರು ಬಿಟ್ಟುಬಿಟ್ಟವು.

ಈತನ ತಲೆಗೆ ಇಂತಹ ವಿಚಾರಗಳನ್ನು ತುಂಬಲು ಈತನ ಚಡ್ಡಿ ಗೆಳೆಯ ಕಾರಣನಾಗಿದ್ದನಂತೆ. ಎಂಥೆಂಥಹವರೋ ಅದೇನೇನೋ ಬರೆದು ಯಾವಯಾವುದೋ

ಪತ್ರಿಕೆಗಳನ್ನು ತಗೋಬೇಕಾದರೆ - ನೀನು ಇಷ್ಟು ಬುದ್ಧಿವಂತ ಅದರ ಗೊಡವೆಗೇ ಹೋಗದೆ ತೆಪ್ಪಗಿದ್ದರೆ ಹೇಗೆ? ಅಂತ ಗೆಳೆಯ ಈತನ ತಲೆಯಲ್ಲಿ ಒಂದು ಹುಳುವನ್ನ ಬಿಟ್ಟುಬಿಟ್ಟ. ಹುಳು ಅದು ಹ್ಯಾಗೆ ಕೆಲಸ ಮಾಡಿತು ಅಂದರೆ ಈ ರಂಗಣ್ಣ ಅಂದಿನಿಂದ ತನ್ನ ಸಾಹಿತ್ಯದ ಸಕಲ ವಿವರಗಳನ್ನೂ ತಲೆಯಲ್ಲಿ ಜೇಬಿನಲ್ಲಿ ಹೆಗಲ ಚೀಲದಲ್ಲಿ ಹೀಗೆ ಎಲ್ಲೆಲ್ಲಿ ಜಾಗವುಂಟೋ ಅಲ್ಲೆಲ್ಲಾ ತುಂಬಿಕೊಂಡು ಅಲೆಯಲಾರಂಭಿಸಿದ.

ಈತನ ಅಲೆತಗಳೂ ಹೇಗಿದ್ದವೆಂದರೆ ಅದೇ ಒಂದು ದೊಡ್ಡ ಪುರಾಣವೋ ಅಥವಾ ನಮ್ಮ ಕನ್ನಡದ ಮೆಗಾ ಸೀರಿಯಲ್ಲುಗಳ ಕಥೆಗೆ ಪೂರಕವೋ ಅಥವಾ ಒಂದು ದೊಡ್ಡ ಮಹಾ ರಾಮಾಯಣಕ್ಕೆ ಕಥಾವಸ್ತುವೋ ಆಗುವಂತಿತ್ತು. ಈತ ಮಸಲಾ ರಸ್ತೆಯಲ್ಲಿ ನಡೆದಾಡುವಾಗ್ಗ ಒಂದು ಪತ್ರಿಕಾ ಕಛೇರಿ ಕಂಡಿತು ಎನ್ನಿ - ಅದರೊಳಗೆ ಈತ ಸೀದಾ ನುಗ್ಗುತ್ತಿದ್ದ. ಸಂಪಾದಕರ ಕೊಠಡಿ ಹುಡುಕಿ ಅದರೊಳಗೆ ನುಸುಳುತ್ತಿದ್ದ. ನುಸುಳಿದವನು ಜೇಬಿನಿಂದಲೋ ಬಗಲ ಚೀಲದಿಂದಲೋ ಕಂತೆ ಕಂತೆ ಹೊತ್ತಿಗೆಗಳನ್ನು ಆಚೆ ತೆಗೆಯುತ್ತಿದ್ದ ಮತ್ತು ಸಂಪಾದಕರ ಸೀಟಿನಲ್ಲಿ ಇರುವವರಿಗೆ ಅದನ್ನು ನೀಡಿ ಅಲ್ಲೇ ಆಗಲೇ ಓದಲು ಮತ್ತು ಮಾರನೇ ದಿವಸದ ಪತ್ರಿಕೆಯಲ್ಲೇ ಮುದ್ರಿಸಲು ಹಕ್ಕೊತ್ತಾಯ ಹೇರುತ್ತಿದ್ದ. ಕೆಲವು ಸಂಪನ್ನ ಸಂಪಾದಕರು ಈತನೆದುರು ಒಂದೋ ಅರ್ಧವೋ ಸಾಲುಗಳ ಮೇಲೆ ಹಾಗೇ ಕಣ್ಣಾಡಿಸಿ ಅವರ ಪತ್ರಿಕೆಯಲ್ಲಿ ಹತ್ತು ವರ್ಷಗಳಿಗಾಗುವಷ್ಟು ಸಾಮಗ್ರಿ ಆಗಲೇ ತುಂಬಿ ತುಳುಕುತ್ತಿರುವ ಕಾರಣ ಬೇರೆ ಪತ್ರಿಕೆ ಅರಸಲು ಸೂಚಿಸುತ್ತಿದ್ದರು. ಮತ್ತೆ ಕೆಲವು ಸಂಪಾದಕರು ಈ ರೀತಿಯ ಸಾಹಿತ್ಯ ಸೇವೆ ಮಾಡುವವರ ಅನುಭವ ಇರುವವರು ಮೆಲ್ಲಗೆ ಸದ್ಯಕ್ಕೆ ಸಂಪಾದಕರು ಡೆಲ್ಲಿಗೆ ಹೋಗಿದ್ದಾರೆ ಎಂದು ಸಾಗ ಹಾಕಿ ರೂಮಿನ ಹೊರಗೆ ಒಬ್ಬ ಜವಾನನನ್ನು ನೇಮಿಸಿಕೊಂಡು ಇಂಥಹವರು ಬಂದರೆ ಮತ್ತೆ ಒಳಗೆ ಸೇರಿಸಬಾರದೆಂದು ತಾಕೀತು ಮಾಡಿ ತಾವು ನಿಶ್ಚಿಂತರಾಗುತ್ತಿದ್ದರು.


ಇದರಿಂದ ನಮ್ಮ ರಂಗಣ್ಣನಿಗೆ ಒಳ್ಳೆಯದಾಗದಿದ್ದರೂ ಒಬ್ಬ ನಿರುದ್ಯೋಗಿಗೆ ಈತನ ಸಲುವಾಗಿ ಒಂದು ಕೆಲಸ ಗಿಟ್ಟಿದ ಅದರಲ್ಲೂ ಭಾಷೆ ತಿಳಿಯದ ಒಬ್ಬನಿಗೆ ಈ ಕನ್ನಡ ದೇಶದಲ್ಲಿ ಕೆಲಸ ಆಗಮಾಡಿದ ಪುಣ್ಯವು ಈತನ ಅರಿವಿಗೆ ಬಾರದ ಹಾಗೆ ಈತನಿಗೆ ಜಮಾ ಆಗುತ್ತಿತ್ತು.

ಮಸಲಾ ರಸ್ತೆಯ ಅಕ್ಕಪಕ್ಕದ ಮನೆಗಳ ಮೇಲೆ ಯಾವುದಾದರೂ ಖ್ಯಾತನಾಮರ ಹೆಸರು ಈತನ ಕಣ್ಣಿಗೆ ಬಿತ್ತೋ ಸರಕ್ಕನೆ ಈತ ಆ ಮನೆಗೆ ನುಗ್ಗುತ್ತಿದ್ದ ಮತ್ತು ಖ್ಯಾತನಾಮರನ್ನು ಹಿಡಿದು ತನ್ನ ಕಂತೆಗಳನ್ನು ಆಚೆ ತೆಗೆದು ಅವರು ಪರಾಮರ್ಶಿಸಿ ತಮ್ಮ ಒಂದು ಹತ್ತು ಪುಟಗಳ ವಿಮರ್ಶೆಯನ್ನು ಸದರಿ ಬರಹಕ್ಕೆ ನೀಡಬೇಕೆಂದು ಕೋರುತ್ತಿದ್ದ. ಖ್ಯಾತನಾಮರು ಕೊಂಚ ತಮಾಷೆ ಸ್ವಭಾವದವರಾಗಿದ್ದರೆ ಈತನ ಬಳಿ ಕಡತ ಪಡೆದು ಆಗಬಾ ಈಗಬಾ ಎಂದು ಸುಮಾರು ವರ್ಷಗಳ ಕಾಲ ಸತಾಯಿಸಿ ನಂತರ ಒಂದು ದಿನ ಕಡತ ಕಳೆದು ಹೋಯಿತು ಎಂದು ದುಃಖದಿಂದ ಕೈ ಆಡಿಸಿ ಈತನಿಂದ ಶಾಶ್ವತವಾಗಿ ತಪ್ಪಿಸಿಕೊಳ್ಳುತ್ತಿದ್ದರು. ತಮಾಷೆ ಸ್ವಭಾವದವರಲ್ಲವಾದರೆ ಈತನ ಮೇಲೆ ನಾಯಿ ಛೂ ಬಿಡುವುದಾಗಿ ಹೆದರಿಸಿ ಓಡಿಸುತ್ತಿದ್ದರು. ಈತನಿಗೆ ಎರಡನೇ ಅನುಭವವೆ ಜಾಸ್ತಿಯಂತೆ.

ಇದರಿಂದ ಈತನಿಗೆ ಅರಿವಿಲ್ಲದಂತೆಯೇ ಈತನಿಗೆ ಹಲವಾರು ಸಾವಿರ ನಾಯಿಗಳಿಗೆ ಖಾಯಂ ನೆಲೆ ಕಲ್ಪಿಸಿಕೊಟ್ಟ ಪುಣ್ಯವೂ ಸಹ ಜಮೆಯಾಗಿದೆ. ಇನ್ನು ದೂರದರ್ಶನದ ನಿರ್ಮಾಪಕರುಗಳು ಸಿಕ್ಕಿಬಿಟ್ಟರಂತೂ ಈತ ಅವರ ಪ್ರಾಣ ಹಿಂಡಿ ತನ್ನ ಕತೆಗಳನ್ನು ಸೀರಿಯಲ್ಲುಗಳನ್ನಾಗಿ ತೆಗೆಯಬೇಕೆಂದು ದುಂಬಾಲು ಬೀಳುತ್ತಿದ್ದ. ಈತನ ಈ ವೀಕ್‌ನೆಸ್ಸುಗಳ ಲಾಭ ಪಡೆದ ಕೆಲವರು ಈತನಿಂದ ಚಿತ್ರ - ಈತನ ಕಥೆಯದ್ದೇ - ತೆಗೆಯುವುದಾಗಿ ಆಶ್ವಾಸನೆ ನೀಡಿ ಇವನ ಬಳಿ ಕಾಸು ಕಿತ್ತು ನಾಮ ಹಾಕಿ ಇದೂ ಸಹ ಈತನ ಅರಿವಿಗೆ ಬಾರದ ಹಾಗೆ ನರಕದಲ್ಲಿ ಮೋಸ ಮಾಡಿದ ಕಾರಣದಿಂದ ಶಿಕ್ಷೆ ಪಡೆವವರ ಪಟ್ಟಿಯಲ್ಲಿ ನಮೂದಿತರಾಗಿದ್ದಾರೆ!

ಸುಮಾರು ಸಂವತ್ಸರಗಳ ಕಾಲ ಈತ ತನ್ನ ಜೀನಿಯಸ್ಸಿಗೆ ಒಂದಲ್ಲಾ ಒಂದು ಕಾಲದಲ್ಲಿ ಮಾನ್ಯತೆ ಸಿಕ್ಕೇ ಸಿಗುತ್ತೆ ಎಂದು ಅದ್ಯಾವುದೋ ಪಕ್ಷಿ ಮಳೆನೀರಿಗೆ ಕಾದ ಹಾಗೆ, ಶಬರಿ ರಾಮನಿಗೆ ಕಾದಂತೆ ಕಾದ. ಆದರೆ ತೀರಾ ಈಚೆಗೆ ಈತನಿಗೆ ಜಗತ್ತಿನಲ್ಲಿ ಇರುವವರೆಲ್ಲರೂ ತನಗೆ ಮೋಸ ಮಾಡಲೆಂದೇ ಹುಟ್ಟಿರುವವರು ಎಂಬ ಸತ್ಯ ಗೋಚರಿಸಿತು. ಆಗಲೇ ನಮ್ಮ ರಂಗಣ್ಣ ಒಂದು ಘೋರ ನಿರ್ಧಾರ ತೆಗೆದುಕೊಂಡ. ಅದೇನಪ್ಪಾ ಎಂದರೆ ಇನ್ನು ಮುಂದೆ ತಾನು ಕೈನಲ್ಲಿ ಪೇನಾ ಮುಟ್ಟುವುದಿಲ್ಲ, ಯಾರ ಮನೆ ಬಾಗಿಲನ್ನೂ ತಟ್ಟಿ ನನ್ನ ಸಾಹಿತ್ಯ ಓದಿ ಎರಡು ಒಳ್ಳೆಯ ಮಾತು ಬರೆದುಕೊಡಿ ಎಂದು ಕೇಳುವುದಿಲ್ಲ, ಯಾವ ಟಿವೀ ಸೀರಿಯಲ್ಲು ಸೃಷ್ಟಿಕರ್ತನನ್ನೂ ಕ್ಯಾರೆ ಎಂದು ಮಾನಾಡಿಸುವುದಿಲ್ಲ, ಸಾಹಿತ್ಯ ಸೇವೆಯನ್ನೂ ಸಹ ಮಾಡುವುದಿಲ್ಲ. ಸರಿಬಿಡಿ ಇನ್ನೂ ಏನೇನೋ ನಿರ್ಧಾರಗಳು ಅವನ ಮನಸ್ಸಿನಲ್ಲಿ ಹುಟ್ಟಿಕೊಂಡಿವೆ ...!

ಅಂದರೆ ಈತ ಒಂದು ವಿಧದಲ್ಲಿ ಸ್ವಯಂ ನಿವೃತ್ತಿ ಘೋಷಿಸಿಕೊಂಡಿದ್ದಾರೆ. ಮತ್ತೆ ತಿಕ್ಕಲು ಯಾವಾಗ ಗರಿ ಕೆದರುವುದೋ ಖಂಡಿತ ತಿಳಿಯದು!



ಸಾಲ ವಸೂಲಿ

- ಸಿ.ಆರ್. ವಿಶ್ವನಾಥ್

''ಲೇ ಬಾರೇ ಇಲ್ಲಿ ..''

'' ... ... ''

''ಕೇಳಿಸ್ಲಿಲ್ವೇನೇ, ಜಯಾ ಲೇ ಜಯಾ .. ''

'' ... ... ''

''ಲೇ .. ಜಯಾ .. ''

''ಏನ್ರೀ ಅದು ದೋಸೆ ಹಂಚು ಹಾರುವ ಹಾಗೆ ಕೂಗ್ತಿದೀರಾ?''

''ಇಲ್ಲೇ ಇದ್ದೀನಿ ಅಂತಾನಾದ್ರೂ, ಹೇಳ್ಳಿಕ್ಕೇನೇ ನಿನಗೆ ದಾಡಿ?''

''ದಾಡಿನಾ. ಹಿಟ್ಟೇನು ನಿಮ್ಮಜ್ಜಿ ಬಂದು ರುಬ್ಬಿ ಕೊಡ್ತಾಳಾ?''

''ನೋಡು ಮನೇಲಿ ಮಿಕ್ಸಿ ಇದ್ರೂ ನೀ ನಮ್ಮಜ್ಜಿ ಸುದ್ದಿಗೆ ಬಂದ್ರೆ ..''

''ಬಂದ್ರೆ ಏನ್ರಿ ಮಾಡ್ತೀರಾ?''

''ಬಂದ್ರೆ ನಾನೂ ನಿಮ್ಮಜ್ಜಿ ಸುದ್ದಿಗೆ ಬಬ್ಬೇಕಾಗುತ್ತೆ ಅಷ್ಟೆ.''

''ಈ ನಿಮ್ಮ ಹಾರಾಟ ಬರೀ ನನ್ಹತ್ರ. ಉತ್ತರ ಕುಮಾರನ ಥರಾ.''

''ಏನೇ ನಾ ಉತ್ತರ ಕುಮಾರನಾ? ನಾ ಸಂಜೆ ಕುಡಿಯೋ ಔಷಧೀನ ನೀ ಈವಾಗ್ಲೇ ಕುಡಿದ್ಯೊ ಏನ್ಕತೆ?''

''ಮತ್ತಿನ್ನೇನ್ರಿ ಅನ್ಬೇಕೂ? ಹೊರಗಡೆ ಹೋಗಿ ಮಾತಾಡೋಕೆ ಧೈರ್ಯ ಇಲ್ಲ. ಇಲ್ಲಿ ನನ್ಮುಂದೆ ಪೌರುಷ ತೋರಿಸ್ತೀರಿ.''

ಹೌದೇ, ಕಟ್ಟಿಕೊಂಡ ಹೆಂಡತಿ ಮುಂದೆ ಪೌರುಷ ತೋರಿಸ್ದೇ ಬೀದೀಲಿ ಹೋಗೋ ದಾಸಯ್ಯನಿಗೆ ತೋರಿಸೋಕಾಗುತ್ಯೇ?''

''ಯಾವ ದಾಸಯ್ಯನಿಗೂ ಬೇಡ. ಆ ರೌಡಿ ರಂಗಣ್ಣನ ಮುಂದೆ ತೋರ್ಸಿ ಸಾಕು.''

''ಏಕೇ ಅವನೇನ್ಮಾಡಿದಾನೆ ಪಾಪ!''

''ಪಾಪ! ಯಾವ ಸೀಮೆ ಜನಾರೀ ನೀವು. ಹತ್ತು ಸಾವ್ರ ರೂಪಾಯಿ ಸಾಲ ಇಸಕೊಂಡು, ಕೊಟ್ಟೋನು ಕೋಡಂಗಿ ಇಸಕೊಂಡೋನು ಈರಭದ್ರ ಅಂತಾರಲ್ಲ ಹಾಗೆ ಇದ್ದಾನಲ್ಲ, ಧೈರ್ಯ ಇದ್ರೆ ಅವನ್ಮುಂದೆ ತೋರುಸ್ರಿ ನಿಮ್ ಪೌರುಷಾನಾ!''

''ನನ್ನ ಕೋಡಂಗಿ ಅಂತೀಯಲ್ಲಾ, ನೀ ನನ್ನ ಅರ್ಧಾಂಗಿ ಅನ್ನೋದನ್ನ ಮರೀಬೇಡ''.

''ನೀವು ಕೋಡಂಗಿಯಾಗಿರೋದ್ರಿಂದ್ಲೇ ಅವ್ನು ಗೋಡಂಬಿ ತಿನ್ತಾ ಇರೋದು.''

''ಛೆ! ಛೆ! ಏನೋ ಕಷ್ಟದಲ್ಲಿದ್ದಾನೆ ಬಿಡೆ ಕೊಡ್ತಾನೆ. ಹಾಗೆಲ್ಲಾ ಹಿಂಸೆ ಮಾಡಿ ಕೇಳ್ಬಾರ್ದು.''

''ಇದಕ್ಕೇ ನಾನು ಹೇಳಿದ್ದು ಉತ್ತರ ಕುಮಾರಾಂತ. ಅವನ್ನ ಜೋರು ಮಾಡಿ ಕೇಳೋ ಅಷ್ಟೂ ಧೈರ್ಯ ಇಲ್ಲವಲ್ರಿ ನಿಮ್ಗೆ. ನೀವೂ ಒಬ್ರು ಗಂಡ್ಸಾ?''

''ಏನೇ ನೀನೇ ಹೀಗೆ ಕೇಳ್ತಿಯಾ?''

''ಹೌದ್ರಿ. ಏನೀಗ? ನಾನೇನಾದ್ರೂ ನಿಮ್ಮ ಸ್ಥಾನದಲ್ಲಿದ್ದಿದ್ರೆ...''

''ಇದ್ದಿದ್ರೆ ಏನ್ಮಾಡ್ತಿದ್ದೆ?''

''ಏನ್ಮಾಡೋದಾ. ಅವನ ಜುಟ್ಟು ಹಿಡ್ದು ವಸೂಲಿ ಮಾಡ್ತಿದ್ದೆ.''

''ನಾನು ಹಾಗೇ ಮಾಡೋಣಾಂತಾನೇ ಇದ್ದೆ ಕಣೆ. ಏನ್ಮಾಡೋದು ಹೋದ್ವಾರಾನೇ ಆ ದ್ರಾಬೆ ತಿರುಪತಿಗೆ ಹೋಗಿ ತಲೆ ಬೋಳಿಸ್ಕೊಂಡು ಬಂದಿದೆ.''

''ನಿಮ್ಗೆ ಮಾತ್ರ 'ಫ್ರಿ'ಯಾಗಿ ಆ ಕೆಲ್ಸಾ ಇಲ್ಲೇ ಮಾಡಿದಾನೆ. ತಲೆ ಬೋಳಿಸ್ಕೊಂಡಿದ್ರೇನಾಯ್ತು. ಕೊರಳು ಪಟ್ಟಿ ಹಿಡ್ದು ವಸೂಲು ಮಾಡಿ. ಅಸಲು ಇರ್ಲಿ, ಬಡ್ಡಿನಾದ್ರೂ ನಿಯತ್ತಾಗಿ ಕೊಡ್ಬೇಡ್ವೇ?''

''ಹಾಗೆಲ್ಲಾ ಕೊರಳು ಪಟ್ಟಿ ಹಿಡಿಯೋಕ್ಕಾಗೊಲ್ಲಾ. ಅವ್ನು ಹಾಕೋದೇ ನೆಕ್‌ಲೆಸ್ ಟೀ ಶರ್ಟು.''

''ಹೋಗಿ ಹೋಗಿ ಅಂತವನಿಗೆ ಸಾಲ ಕೊಟ್ಟಿದ್ದಿರಲ್ಲಾ ನಿಮಗೆ ಹೆಡ್ತೀ ಲೆಸ್ಸು.''

''ಹೌದು. ಅವ್ನಿಗೆ ಜೋರು ಮಾಡಿ ಸಾಲ ಕೇಳಿದ್ರೆ ಹೆಡ್ತು ನಿಜಕ್ಕೂ ಲೆಸ್ಸೇ ಆಗುತ್ತೆ. ಆ ನಾರಾಯಣಾಚಾರಿ ಹೀಗೇ ಕೊರಳು ಪಟ್ಟಿ ಹಿಡಿಯಲು ಹೋಗಿ ಕೊಲೆನೇ ಆದ್ನಲ್ಲ. ನಾವೇನಾದ್ರೂ ಆಟ ಆಡ್ಲಿಕ್ಕೆ ಹೋದ್ರೆ ಅಷ್ಟೇ ಗತಿ. ಏನೋ ನೀ ಕೊಟ್ಟಿರೋ ಪುಟಗೋಸಿ ಹತ್ತು ಸಾವ್ರಕ್ಕೆ ಬಡ್ಡೀ ಬೇರೆ ಕೇಳ್ತೀಯೇನೋ ಬಡ್ಡಿಮಗನೇ ಅಂತಾ ಕೈ ಮುಷ್ಟಿ ತೋರ್ಸಿ ಕೇಳ್ತಾನೆ ಅಷ್ಟೇ.''

''ಅದಕ್ಕೇ ನಾ ಕೇಳಿದ್ದು ನೀವೂ ಗಂಡ್ಸಾಂತ.''

''ಓಹೋ ಹಾಗಂತಿಯೇನು. ಏನೋ ತಮಾಷೆಗೆ ಹೇಳ್ದೆ ಅಂತಂದ್ಕೊಂಡಿದ್ದೆ. ನೋಡ್ತಾ ಇರೀಗ. ಆ ತಿರುಬೋಕಿಯಿಂದ ಹೇಗೆ ಸಾಲ ವಸೂಲ್ಮಾಡ್ಕೊಂಡು ಬರ್ತೀನಂತಾ.''

''ರೀ .. ರೀ .. ಏನ್ರೀ ಇದು. ಮಚ್ಚು ತೆಗೊಳ್ತಾ ಇದ್ದೀರಾ..?''

''ಹೌದೇ. ಏಕೆ ಭಯಪಡ್ತಿಯಾ. ಇದೋ ನೋಡ್ತಾ ಇರು.''

''ರೀ.. ರೀ.. ನಿಜಕ್ಕೂ ನೀವು ಗಂಡ್ಸೇನೆ. ದಯವಿಟ್ಟು ಆ ಮಚ್ಚನ್ನು ಅಲ್ಲೇ ಇಟ್ಟಿಡಿ ಅಂದ್ರೇ..''

'' ಇಲ್ಲಾ, ಸಾಧ್ಯಾನೇ ಇಲ್ಲಾ. ಒಂದೋ ನನ್ನ ಹಣ ಬರ್ಬೇಕು ಇಲ್ಲಾ ಅವನ ಹೆಣ ಬೀಳ್ಬೇಕು ಇವತ್ತು.''

''ಅಯ್ಯೋ ಬೇಡಾರೀ. ಅವನ್ನ ಕೊಂದು ನೀವೇನಾದ್ರೂ ಜೈಲಿಗೋದ್ರೆ ನನ್ನ ಪಾಗೂ ಮಕ್ಳ ಗತಿ ಏನ್ರೀ..''

''ಹೌದಲ್ವಾ!''

''ನನ್ನನ್ನು ನಡು ನೀರಲ್ಲಿ ಮಾತ್ರ ಬಿಡ್ಬೇಡಿ.''

''ಅದನ್ನಾನು ಯೋಚ್ನೇನೇ ಮಾಡ್ಲಿಲ್ಲಾ ನೋಡು. ಹೋಗ್ಲಿ ಬಿಡು. ಅವನಿಗೂ ಹೆಂಡ್ತಿ ಮಕ್ಕಿರೋದ್ರಿಂದ ಸುಮ್ನೆ ಬಿಡ್ತಾ ಇದೀನಿ.''

''ಸದ್ಯ ಆ ಮಚ್ಚು ಅಲ್ಲಿಟ್ರಲ್ಲಾ ಅದೇ ಸಂತೋಷ.''

''ಮಚ್ಚು ತೆಗೆದುಕೊಂಡ್ಮೇಲಾದ್ರೂ ಮೆಚ್ಚಿದೆಯಲ್ಲಾ. ಇನ್ನೂ ಒಂದು ವಿಷ್ಯ ಹೇಳೋಕೆ ಮರ್ತಿದ್ದೇ ನೋಡು. ನಾನು ಅವ್ನಿಗೆ ಸಾಲ ಏಕೆ ಕೊಟ್ಟೇಂದ್ರೆ, ಏನೋ ನಮ್ಮ ಪರವಾಗಿ ಇರ್ತಾನೆ. ಯಾರಾದ್ರೂ ಏನಾದ್ರೂ ತೊಂದ್ರೆ ಕೊಟ್ರೆ ಒಂದು ಧೈರ್ಯ ಇರುತ್ತೇಂತಾ ಅಷ್ಟೇ. ನಮ್ಮ ಮನೆ ವಾನರರ ಕಾಟದ ಬಗ್ಗೇನೂ ಅವನ್ಗೆ ಹೇಳಿದೀನಿ.''

''ಆದ್ರೆ, ನಮ್ಮ ಮನೇಲಿ ಯಾವ ಮಂಗಗಳ ಕಾಟವೂ ಇಲ್ಲಲ್ಲ.''

''ವಾನರರ ಕಾಟ ಇಲ್ಲ ನಿಜ. ಆದ್ರೆ 'ಓನರ್' ಕಾಟ ಇದೆಯಲ್ಲ?''

''ಸ್ವಲ್ಪ ಮೆತ್ತಗೆ ಮಾತಾಡಿ, ಯಾರೋ ಬಾಗಿಲು ಬಡಿತಾ ಇದ್ದಾರೆ.''

''ಹೌದು. ಹೋಗಿ ಕಿಟಿಕೀಲಿ ನೋಡು.''

''ರೀ ಮನೆ ಓನರ್ರು, ರಂಗಣ್ಣ ಬಂದಿದ್ದಾರೆ.''

''ಹಾಗಾದ್ರೆ, ಬಾಗಿಲು ತೆಗಿ.''

''ಬನ್ನಿ ಸಾರ್. ಒಳಗೆ ಬನ್ನಿ. ನಿಮ್ದೆ ಮನೆ ಅಲ್ವೇ. ಬನ್ನಿ ಕುತ್ಕೋಳಿ.''

''ಇರಲಿ ಬಿಡಪ್ಪಾ. ಹಾ ಒಂದು ವಿಷ್ಯ ನೋಡು. ನಿನ್ನ ಸೋರೋ ಮನೆ ರಿಪೇರಿಗೆ ನಾಳೇನೇ ಜನಾ ಕಳಿಸ್ತೀನಿ. ಹಾಗೇ ನಲ್ಲಿ ಪೈಪು ಹಾಕಿಸಿ ಮನೆಗೆ ಸುಣ್ಣ-ಬಣ್ಣ ಮಾಡಿಸ್ತೀನಿ. ಕಳೆದ ತಿಂಗಳು ಏರಿಸಿದ ಐನೂರು ರೂಪಾಯಿ ಬಾಡಿಗೆ ಮನ್ನಾ ಮಾಡಿದೀನಿ. ಮೊದ್ಲು ಕೊಟ್ಟಷ್ಟೇ ಕೊಡು ಪರ್ವಾಗಿಲ್ಲ. ನಮ್ಮ ರಂಗಣ್ಣ ನಿನ್ನ ಕಷ್ಟಾ ಎಲ್ಲಾ ಹೇಳ್ದ. ನನಗೂ ಅಯ್ಯೋ ಅನ್ನಿಸ್ತು. ಹಾಗೇ ಹೇಳಿ ಹೋಗೋಣಾಂತ ತಕ್ಷಣ ಬಂದೆ. ಇನ್ನು ಬರ್ತೀನಿ ನಾನು.''

''ಇರಿ ಸಾರ್ ಕಾಫಿ ಕುಡ್ದು ಹೋಗಿ.''

''ಇಲ್ಲಪ್ಪಾ. ರಂಗಣ್ಣನೇ ಎಲ್ಲಾ ಕುಡ್ಸಿದಾನೆ. ಇನ್ನೊಮ್ಮೆ ಎಲ್ಲಾ ಕೆಲ್ಸ ಆದ್ಮೇಲೆ ಆರಾಮವಾಗಿ ಬಂದು ಕುಡಿದು ಹೋಗ್ತೇನೆ. ಮೊದ್ಲು ಹೋಗಿ ಪ್ಲಂಬರ್ರು, ಪೇಯಿಂಟರ್‌ಗಳನ್ನ ನೋಡ್ಬೇಕು. ಬರ್ಲಾ.''


''ಆಯ್ತು.''

''ಏನ್ರೀ ಇದು ನಂಬಲಿಕ್ಕೇ ಆಗ್ತಾ ಇಲ್ಲ.''

''ಎಲ್ಲಾ ಆ ರಂಗಣ್ಣನ ಕರಾಮತ್ತು. ನೋಡಿದ್ಯಾ ಸಮಸ್ಯೆ ಹೇಗೆ ಬಗೆಹರೀತೂಂತ.''

''ಅಯ್ಯೋ. ಎಷ್ಟು ಒಳ್ಳೆಯೋರೂರೀ ನೀವೂ. ನಿಜವಾದ ಗಂಡ್ಸು ಅಂದ್ರೆ ನೀವೇನೇ. ನಿಮ್ಮ ತಲೆನಾ ಯಾವ್ದಾದ್ರೂ ಫಾರೀನ್ ಮ್ಯೂಸಿಯಂನಲ್ಲಿಡಬೇಕು.''

'' ... !!''



ನಾನು ಮತ್ತು ನನ್ನ ಕಂಪ್ಯೂಟರ್

- ಇಂದು ರಮೇಶ್

ಏಳೆಂಟು ವರ್ಷಗಳ ಹಿಂದಿನ ಮಾತು. ನನಗೆ ತಿಳಿದಿದ್ದ ಸ್ನೇಹಿತರು, ನಮಗಿಂತ ಚಿಕ್ಕವಯಸ್ಸಿನ ಹಲವಾರು ನೆಂಟರು, ಕೊನೆಗೆ ನಮ್ಮ ಮಕ್ಕಳು ಕೂಡ ಬೇರೊಂದು ಭಾಷೆಯನ್ನೇ ಮಾತಾಡುವುದಕ್ಕೆ ಪ್ರಾರಂಭಿಸಿದ್ದರು. ಎಲ್ಲರ ಮನೆಗಳಲ್ಲೂ, ಆಫೀಸುಗಳಲ್ಲೂ ಕಂಪ್ಯೂಟರುಗಳು ಬಂದಿದ್ದವು. ಅವರೆಲ್ಲಾ ಗಿಗಬೈಟ್, ಮೆಮೊರಿ, ಈಮೈಲ್, ಆಮೈಲ್ ಅಂತೆಲ್ಲಾ ಮಾತಾಡಿದಾಗ, ನಾನೆಲ್ಲೋ ಬೇರೆ ಲೋಕದಲ್ಲಿದ್ದೇನೆ ಅನ್ನಿಸುತ್ತಿತ್ತು. ಮಗನ ಕಂಪ್ಯೂಟರ್‌ನಲ್ಲಿ ದೂರದ ನೆದರ್ಲ್ಯಾಂಡ್‌ನಲ್ಲಿ ಯಾರೋ ಹಾಕಿದ್ದ ಕನ್ನಡದ ವೆಬ್‌ಸೈಟ್ ನೋಡಿ ಖುಶಿಪಟ್ಟಿದ್ದೆವು. ಮಗನ ಜೊತೆ ಪತ್ರ ವ್ಯವಹಾರ ಸುಗಮವಾಗಲಿ ಅಂದುಕೊಂಡು, ನಾವೂ ಒಂದು ಕಂಪ್ಯೂಟರ್ ಜ್ಞಾನದ ಜೊತೆ ಕಂಪ್ಯೂಟರ್ ಮಾರಿದ ಅಂಗಡಿಯವನ ಬಳಿ ಕೇಳಿ, ತಪ್ಪುಗಳನ್ನು ಮಾಡಿ ಅದನ್ನು ಸರಿಪಡಿಸುವುದಕ್ಕೆ ಅವನ ಮೊರೆಹೊಕ್ಕು, ಅವನ ಹುಡುಗರಿಗೆ ಕಾದು, ಕೊನೆಗೊಮ್ಮೆ ನನಗೂ ಕಂಪ್ಯೂಟರಿನಲ್ಲಿ ಕೆಲಸ ಮಾಡುವುದಕ್ಕೆ ಬರುತ್ತದೆ ಎನ್ನುವಷ್ಟು ಆಯಿತು.

ಈಮೈಲ್ ನನಗಷ್ಟೇ ಅಲ್ಲ, ಅಮೇರಿಕಾದಲ್ಲಿದ್ದ ಪಕ್ಕದ ಮನೆಯವರ ಮಗಳಿಗೆ, ಎಂದೂ ಮಾತಾಡಿಸದ ದೂರ ನೆಂಟರಿಗೆ, ಬೇರೆಬೇರೆ ದೇಶಗಳಲ್ಲಿದ್ದ ಹಳೆಯ ಸ್ನೇಹಿತೆಯರಿಗೆ, ಹೀಗೆ ನನ್ನ ಪತ್ರವ್ಯವಹಾರ ಪ್ರಾರಂಭವಾಯಿತು.

ಆಗೆಲ್ಲಾ ಇಂಟರ್ನೆಟ್ ಸಿಗುವುದೇ ಕಷ್ಟವಾಗುತ್ತಿತ್ತು. ಸಿಕ್ಕಿದಾಗ ಕಂಡ ಕಂಡ ಸೈಟುಗಳನ್ನೆಲ್ಲಾ ವಿಸಿಟ್ ಮಾಡಿ, ನಾನೂ ಏನೋ ಮಹಾ ಕೆಲಸ ಮಾಡುತ್ತಿದ್ದೇನೆ ಅಂತ ಸಂತೋಷ ಪಡುತ್ತಿದ್ದೆ.

ನಮ್ಮದೇ ವಯಸ್ಸಿನ ಸ್ನೇಹಿತರು ಮನೆಗೆ ಬಂದಾಗ ನನ್ನ ಕಂಪ್ಯೂಟರ್ ತೋರಿಸಿ ಸ್ವಲ್ಪ ಜಂಭಾನೂ ಪಡುತ್ತಿದ್ದೆ.

ಈಗ ಸಮಯ ಬದಲಾಗಿದೆ. ಆಗಿನಂತೆ ಈಗ ರಸ್ತೆಯಲ್ಲೆಲ್ಲ ಬ್ಯಾನರ್ ಹಾಕಿ, ನಮ್ಮಲ್ಲಿ ಬಂದು ಇಂಟರ್ನೆಟ್ ಸರ್ಫ್ ಮಾಡಿ ಅಂತ ಕೇಳೋರಿಲ್ಲ. ಗಂಟೆಗೆ ಅರವತ್ತು ರೂಪಾಯಿ ತೆಗೆದುಕೊಳ್ಳುತ್ತಿದ್ದವರು ಈಗ ಇಪ್ಪತ್ತು ಕೊಟ್ರೆ ಸಾಕು ಅನ್ನುವ ಸ್ಥಿತಿ ಬಂದಿದೆ. ಮೊಮ್ಮಕ್ಕಳು ನನಗೆ ಕಂಪ್ಯೂಟರ್ ನಡೆಸುವುದನ್ನು ಲೀಲಾಜಾಲವಾಗಿ ಹೇಳಿಕೊಡುತ್ತಾರೆ. ಇರಲಿ.

ಕಂಪ್ಯೂಟರ್ ಬಂದಮೇಲೆ ಅದರ ಮುಂದೆ ಕೂತು ಏನೇನೋ ತೋಚಿದ್ದನ್ನೆಲ್ಲಾ ಬರೆಯುತ್ತಿದ್ದೆ. ಒಮ್ಮೆ ರಮೇಶ್ ಸುಮ್ಮನೆ ಇರಲಾರದೆ 'ಒಂದು ಕಥೆನೋ ಕಾದಂಬರಿಯೋ ಯಾಕೆ ಬರೆಯಬಾರದು ನೀನು?' ಅಂದರು. ಸರಿ ಅದನ್ನೇ ಮುಂದಿಟ್ಟುಕೊಂಡು ಒಂದು ಕಥೆ ಬರೆಯುವುದಕ್ಕೆ ಶುರುಮಾಡಿದೆ.

ಕಥೆ ಅಂದರೆ ಹೇಗೆ? ನನ್ನ ಅರವತ್ತು ಪ್ಲಸ್ ವರ್ಷಗಳಲ್ಲಿ ಕಂಡದ್ದು ಸಾಕಷ್ಟು ಇದೆ ಅಂತ ಒಂದು ಯೋಚನೆ ಬಂತು. ಆದರೆ ಕಂಡಿದ್ದನ್ನೆಲ್ಲಾ ಬರೆಯುವುದಕ್ಕೆ ಆಗುತ್ತದೆಯೇ? ಕಂಡದ್ದನ್ನು ಕಂಡ ಹಾಗೆ ಹೇಳಿದರೆ ಅದೆಷ್ಟು ಜನ ಪರಕೆ, ಕೋಲು, ಇನ್ನೂ ಭೀಕರವಾದ ಆಯುಧಗಳನ್ನು ತೆಗೆದುಕೊಂಡು ಬಂದರೆ ಹೇಗೆ ಅಂತ ಇನ್ನೊಂದು ಯೋಚನೆ ಬಂತು. ಹೇಗಾದರೂ ಸರಿ, ಪ್ರಾರಂಭ ಮಾಡೇಬಿಡೋಣ ಅಂತ ಕಥೆ ಬರೆಯಲು ಷುರು ಮಾಡಿದೆ. ರಾತ್ರಿ ನಿದ್ದೆ ಬಾರದಿದ್ದಾಗ, ದಿನದಲ್ಲಿ ಇನ್ನೇನೂ ಕೆಲಸ ಇಲ್ಲದಾಗ ನನ್ನ ಕೆಲಸ ಆರಂಭವಾಯಿತು. ಕಥೆ ಮನಸ್ಸಿನಲ್ಲಿ ಹುಟ್ಟುವುದಾದರೂ ಹೇಗೆ? ನನ್ನದೇ ಜೀವನದ ಹಲವಾರು ಚಿತ್ರಗಳನ್ನು ಜ್ಞಾಪಿಸಿಕೊಂಡೆ. ಮಲ್ಲೇಶ್ವರದ ಮಾರ್ಗೋಸಾ ರೋಡಿನಲ್ಲಿದ್ದ, ಆಗ ನಾನು ಅತಿ ದೊಡ್ಡ ಬಂಗಲೆ ಎಂದುಕೊಂಡಿದ್ದ ಪ್ರೈಮರಿ ಶಾಲೆ, ನಮ್ಮ ಮನೆಯಲ್ಲಿ ಹಿರಿಯರೊಬ್ಬರ ಅತೀ ಮಡಿಯಿಂದ ಬೆಳಗಿನ ತಿಂಡಿ ಬೇಗ ತಯಾರಾಗದಿದ್ದಾಗ ನಾವು ಹೋಗುತ್ತಿದ್ದ ಐದನೇ ಕ್ರಾಸಿನ ಹತ್ತಿರ ಇದ್ದ ಗಣೇಶ್ ಭವನ, ಕಾಡು ಮಲ್ಲೇಶ್ವರನ ಗುಡಿ, ಹದಿನೇಳನೇ ಕ್ರಾಸಿನಲ್ಲಿದ್ದ ಶ್ರೀರಂಗಮ್ಮನ ನರ್ಸರಿ ಶಾಲೆ, ಎಲ್ಲ ಜ್ಞಾಪಿಸಿಕೊಂಡು ಕಂಪ್ಯೂಟರಿನ ಹೊಟ್ಟೆಗೆ ಹಾಕಿದೆ. ಮಧ್ಯೆ ಮಧ್ಯೆ ರಮೇಶ್ ''ನಿನ್ನ ಮಹಾ ಸಾಹಿತ್ಯ ಎಲ್ಲಿಗೆ ಬಂತು?'' ಅಂತ ಕೇಳಿದಾಗ ತೋರಿಸುವುದಕ್ಕೆಂದು ಒಂದು ಪ್ರಿಂಟರ್ ಕೊಂಡು, ಪ್ರಿಂಟ್ ಮಾಡಿ ಅವರಿಗೆ ಕೊಟ್ಟು, ಅವರು ಓದಿನೋಡಿ, ಮೆಚ್ಚಿಗೆ ಸೂಚಿಸಿದಾಗ ಸ್ವರ್ಗಕ್ಕೆ ಇನ್ನೇನು ಎರಡೇ ಮೆಟ್ಟಿಲು ಅನ್ನಿಸುತ್ತಿತ್ತು.

ಸುಮಾರು ಇನ್ನೂರು ಪುಟಗಳನ್ನು ಬರೆದು ಮುಗಿಸಿ, ಇನ್ನೇನು ನನಗೆ ನೋಬೆಲ್ ಪ್ರಶಸ್ತಿ ಅಲ್ಲದಿದ್ದರೆ ಬುಕರ್ ಪ್ರಶಸ್ತಿಯಂತೂ ಖಂಡಿತ ಬಂದೇಬರುತ್ತೆ ಅಂತ ಅಂದುಕೊಳ್ಳುವ ಹೊತ್ತಿಗೆ ಸರಿಯಾಗಿ ಪ್ರಿಂಟರ್ ಕೈಕೊಟ್ಟಿತು. ಎಲ್ಲಿಗೋ ಏತಕ್ಕೋ ಬರೆದ ಒಂದು ಲೇಖನವನ್ನು ಪ್ರಿಂಟ್ ಮಾಡಬೇಕೆಂದು ಒಂದು ಫ್ಲಾಪಿಡಿಸ್ಕ್‌ನಲ್ಲಿ ಹಾಕಿ ಹತ್ತಿರದ ಇಂಟರ್ನೆಟ್ ಅಂಗಡಿಗೆ ತೆಗೆದುಕೊಂಡು ಹೋಗಿ ಪ್ರಿಂಟ್ ಮಾಡಲು ಕೊಟ್ಟೆ. ಪ್ರಿಂಟ್ ಏನೋ ಆಯಿತು. ಆದರೆ ಅಂದು ರಾತ್ರಿ ಅದೇ ಫ್ಲಾಪಿಯನ್ನು ಹಾಕಿ ಬೇರೇನೋ ಕೆಲಸ ಮಾಡಲು ನೋಡಿದಾಗ ನನ್ನ ಕಂಪ್ಯೂಟರಿನಲ್ಲಿದ್ದ ಎಲ್ಲಾ ಫೈಲುಗಳೂ ಮಾಯಾವಾಗಿದ್ದವು! ಮಧ್ಯರಾತ್ರಿ, ರಮೇಶ್ ನಿದ್ದೆ ಮಾಡುತ್ತಿದ್ದರು, ಯಾರಿಗೆ ಹೇಳಲಿ, ಯಾರನ್ನು ಕರೆಯಲಿ, ಏನೂ ತೋಚಲಿಲ್ಲ. ಕಣ್ಣಲ್ಲಿ ನೀರು, ಏನೋ ಅನ್ಯಾಯವಾದಂತೆ, ಯಾರೋ ನನ್ನನ್ನು ನೋಡಿ ನಕ್ಕಂತೆ, ದುಃಖ ಎಷ್ಟಾಯಿತೆಂದರೆ, ಬಿಕ್ಕಿಬಿಕ್ಕಿ ಅಳು ಷುರು ಮಾಡಿಬಿಟ್ಟೆ, ಹಾಗೇ ತುಂಬ ಹೊತ್ತು ಕಂಪ್ಯೂಟರನ್ನೇ ನೋಡುತ್ತ ಕೂತಿದ್ದೆ. ರಮೇಶರಿಗೆ ಎಚ್ಚರವಾಗಿ ಬಂದವರು ನನ್ನನ್ನು ನೋಡಿ ಏನೋ ಆಗಿಹೋಗಿದೆ ಅಂತ ಅವರೂ ಗಾಬರಿಗೊಂಡರು. ಮಾರನೆದಿನ ಅದೇ ಇಂಟರ್ನೆಟ್ ಅಂಗಡಿಗೆ ಹೋಗಿ ಅಲ್ಲಿದ್ದ ಮೆಕಾನಿಕ್ ಬಂದು ನೋಡಿ, ಎಷ್ಟಾಗುತ್ತೋ ಅಷ್ಟು ಫೈಲುಗಳನ್ನ ರಿಕವರ್ ಮಾಡುತ್ತೀನಿ ಅಂದಾಗಲೇ ನನಗೆ ಸ್ವಲ್ಪ ಸಮಾಧಾನವಾಗಿದ್ದು. ನನ್ನ ಮಹಾ ಸಾಹಿತ್ಯ? ಇನ್ನೂರು

ಎಚ್ಚರವಾಗಿ ಬಂದವರು ನನ್ನನ್ನು ನೋಡಿ ಏನೋ ಆಗಿಹೋಗಿದೆ ಅಂತ ಅವರೂ ಗಾಬರಿಗೊಂಡರು. ಮಾರನೆದಿನ ಅದೇ ಇಂಟರ್ನೆಟ್ ಅಂಗಡಿಗೆ ಹೋಗಿ ಅಲ್ಲಿದ್ದ ಮೆಕಾನಿಕ್ ಬಂದು ನೋಡಿ, ಎಷ್ಟಾಗುತ್ತೋ ಅಷ್ಟು ಫೈಲುಗಳನ್ನ ರಿಕವರ್ ಮಾಡುತ್ತೀನಿ ಅಂದಾಗಲೇ ನನಗೆ ಸ್ವಲ್ಪ ಸಮಾಧಾನವಾಗಿದ್ದು. ನನ್ನ ಮಹಾ ಸಾಹಿತ್ಯ? ಇನ್ನೂರು ಪುಟಗಳಿದ್ದದ್ದು ಕೇವಲ ಮೂರು ಪುಟ ಮಾತ್ರ ಓದುವ ಹಾಗಿತ್ತು. ಮಿಕ್ಕದ್ದೆಲ್ಲಾ ಬರೀ ಚೌಕಗಳು.

ಪುನಃ ನನ್ನ ಮಹಾ ಸಾಹಿತ್ಯ ಶುರುವಾಯಿತು. ಯಾರೋ ಹೇಳಿದರು ಅಂತ ಫ್ಲಾಪಿ ಡಿಸ್ಕುಗಳನ್ನು ತಂದು ಬರೆದದ್ದನ್ನೆಲ್ಲಾ ಅವುಗಳಲ್ಲಿ ತುಂಬಿಡುತ್ತಿದ್ದೆ. ಮನೆ ತುಂಬ ಫ್ಲಾಪಿ ಡಿಸ್ಕುಗಳು. ಅದೂ ನನ್ನ ಅದೃಷ್ಟ. ಫ್ಲಾಪಿಗಳೂ ಕೂಡ ಕರಪ್ಟ್ ಆಗಿ ಅವನ್ನೂ ಉಪಯೋಗಿಸುವ ಹಾಗಿರಲಿಲ್ಲ. ಒಂದು ನವರಾತ್ರಿಯಲ್ಲಿ ಮೊಮ್ಮಗನಿಗೆ ಬೊಂಬೆ ಇಡುತ್ತಿದ್ದುದು ಹೇಗೆ ಅಂತ ತೋರಿಸೋದಕ್ಕೆ ನಮ್ಮ ಮನೆಯಲ್ಲೂ ಬೊಂಬೆ ಇಟ್ಟಿದ್ದೆ. ಕರಪ್ಟ್ ಆದ ಫ್ಲಾಪಿಗಳಿಗೆ ಬಣ್ಣ ಹಚ್ಚಿ, ಫೆವಿಕೋಲ್ ಅಂಟಿಸಿ ಮನೆ, ರಸ್ತೆ, ಸ್ಕೂಲು ಅಂತೆಲ್ಲಾ ಮಾಡಿಟ್ಟು ಹಬ್ಬ ಮುಗಿದ ಮೇಲೆ ಕಸದ ತೊಟ್ಟಿಗೆ ಹಾಕಿದ್ದಾಯಿತು.


ನನ್ನ ಕೆಲವು ಸ್ನೇಹಿತೆಯರು ಈಗಲೂ ಕೇಳುತ್ತಾರೆ, ನಿನಗೇನು ಸಮಯ ಹೋಗಿದ್ದೇ ತಿಳಿಯುವುದಿಲ್ಲ, ಕಂಪ್ಯೂಟರಿನಲ್ಲಿ ಮಕ್ಕಳ ಜೊತೆ ಚಾಟ್ ಮಾಡ್ತಾ, ಇಂಟರ್ನೆಟ್ಟಿನಲ್ಲಿ ಸರ್ಫ್ ಮಾಡ್ತಾ ಹಾಯಾಗಿ ಕಾಲ ಕಳೀಬಹುದು ಅಂತಾರೆ. ಅವರಿಗೇನು ಗೊತ್ತು ನನ್ನ ಪಾಡು. ಯಾವುದೋ ಔಷಧದ ಸೈಡ್ ಎಫೆಕ್ಟ್ ತಿಳಿಯಲು ಒಂದು ಸೈಟಿಗೆ ಹೋಗಿದ್ದೆ. ಅದಾದಮೇಲೆ ನನ್ನ ಈಮೈಲಿನಲ್ಲಿ ಬರೀ ಔಷಧಿಗಳ ಜಾಹಿರಾತು - ತೆಳ್ಳಗಾಗುವುದಕ್ಕೆ, ನಿದ್ದೆ ಮಾಡುವುದಕ್ಕೆ, ಕೆಂಪು ಬಣ್ಣ ಬರುವುದಕ್ಕೆ, ಕೂದಲು ಉದುರದೇ ಇರುವುದಕ್ಕೆ, ಹೀಗೆ ದಿನಾ ಜಾಹಿರಾತುಗಳು. ಅಷ್ಟೇ ಆದರೆ ಪರವಾಗಿಲ್ಲ. ಈಚೀಚೆಗೆ ವಯಾಗ್ರ ಟಪಾಲಿನಲ್ಲಿ ಮನೆಗೆ ಕಳಿಸುತ್ತೇವೆ ಅಂತ ದಿನಕ್ಕೆ ಹತ್ತು ಜಾಹಿರಾತುಗಳು. ಅಯ್ಯೋ ದೇವರೆ ಈ ಇಳಿವಯಸ್ಸಿನಲ್ಲಿ ಇದೆಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟೆ ಅಂತ ಬೇಜಾರಾಗಿ ಮೈಲ್ ಕಳಿಸಿದ ಎಲ್ಲರಿಗೂ ಹೀಗೆಲ್ಲ ಮಾಡಬೇಡಿ. ಈ ರೀತಿ ನನಗೆ ಬೇಡದ ಮೈಲ್ ಕಳಿಸಿದರೆ ನಾನು ಪೋಲೀಸರಿಗೆ ಕಂಪ್ಲೆಂಟ್ ಕೊಡುತ್ತೇನೆ ಅಂತ ಹೆದರಿಸಿದೆ. ಉಹೂಂ, ಏನೂ ಪ್ರಯೋಜನವಿಲ್ಲ. ಈಗಲೂ ಬೇಕಾದ್ದಕ್ಕಿಂತ ಹೆಚ್ಚಾಗಿ ಬೇಡದ್ದೇ ಈಮೈಲ್ ಬರುತ್ತಿವೆ. ಅದೇನೊ ಫೈರ್ವಾಲ್ ಅಂತೆ, ಇನ್ನೇನೋ ಬ್ಲಾಕ್ ಅಂತೆ ಅದರಿಂದ ಈ ರೀತಿ ಈಮೈಲ್ ಬರೋದಿಲ್ಲವಂತೆ, ತರಿಸೋಣ ಅಂದರೆ ಒಂದೇ ಹೆದರಿಕೆ, ಅದರಿಂದ ಇನ್ನೇನಾದರೂ ತಲೆನೋವು ಶುರು ಆದರೆ ಅಂತ.

ಅಷ್ಟೇ ಅಲ್ಲ, ನಾವು ಚಿಕ್ಕವರಾಗಿದ್ದಾಗ ಹಿರಿಯರು ಹೇಳುತ್ತಿದ್ದರು, 'ಸಾಲ ಮಾಡಬಾರದು, ಚಾಪೆ ಇದ್ದಷ್ಟೇ ಕಾಲು ಚಾಚಬೇಕು' ಅಂತ. ಆಫೀಸಿನಲ್ಲಿ ಒಮ್ಮೊಮ್ಮೆ ಪ್ರಾವಿಡೆಂಟ್ ಫಂಡಿನಿಂದ ನಮ್ಮದೇ ಹಣವನ್ನು ಸಾಲ ತೆಗೆಯುವುದಕ್ಕೆ ಹೋದರೆ

ಅದೆಷ್ಟು ಕಷ್ಟ ಆಗುತ್ತಿತ್ತು! ಆಫೀಸರು ದಯೆ ಮಾಡಿ, ಆಮೇಲೆ ಅಕೌಂಟೆಂಟ್ ಮತ್ತು ಡೀಲಿಂಗ್ ಕ್ಲರ್ಕ್ ಇವರಿಗೆಲ್ಲಾ ಕಾಫಿ ಕುಡಿಸಿ ಗೋಗರೆದುಕೊಂಡಮೇಲೆ ಏನೋ ನಮಗೆ ದೊಡ್ಡ ಉಪಕಾರ ಮಾಡುವವರ ಹಾಗೆ ಸಾಲ ಕೊಡುತ್ತಿದ್ದರು. ಆದರೆ ಈಗ? ಈಗ ಸಾಲ ತೆಗೆದುಕೊಳ್ಳುವುದು ಎಷ್ಟು ಸುಲಭವಾಗಿದೆ ಅಂದರೆ ನಂಬೋದೂ ಕಷ್ಟವೇ. ಸುಮ್‌ಸುಮ್ಮನೆ ಟೆಲಿಫೋನ್ ಮಾಡಿ 'ನಿಮ್ಮ ಕಾರು ಕೊಟ್ಟು ಬೇರೆ ಕಾರು ತೆಗೆದುಕೊಳ್ಳಿ' ಇಲ್ಲಾ 'ಮನೆ ಕಟ್ಟುತ್ತೀರ? ನಮ್ಮ ಬ್ಯಾಂಕಿಗೆ ಬನ್ನಿ, ಸಾಲ ಕೊಡುತ್ತೇವೆ' ಇಲ್ಲಾ 'ಪ್ರವಾಸ ಮಾಡಬೇಕೆ? ಈಗಲೇ ಹೋಗಿಬನ್ನಿ, ಹಣ ಆಮೇಲೆ ಕೊಟ್ಟರಾಯಿತು' ಅನ್ನುವವರಿಗೆಲ್ಲಾ ಬೇಡ ಎನ್ನುವುದು ಅಭ್ಯಾಸವಾಗಿ ಹೋಯಿತು. ಈಗ ಈಮೈಲಿನಲ್ಲಿ ದಿನಕ್ಕೆ ಹತ್ತು ಹದಿನೈದು ಜನ ಸಾಲ ಕೊಡುವುದಕ್ಕೆ ಮುಂದೆ ಬರುತ್ತಿದ್ದಾರೆ. ಈಗೆಲ್ಲಾ ಯಾವ ಸಂಕೋಚವೂ ಇಲ್ಲದೆ ಅಂಥ ಮೈಲ್ ಮೆಸೇಜ್‌ಗಳನ್ನು ಜಂಕ್ ಅಂತ ಡಿಲೀಟ್ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ.

ನನ್ನ ಮಹಾ ಸಾಹಿತ್ಯ? ಪ್ರಿಂಟ್ ಆಗಿ ಕೂತಿದೆ. ಹಲವು ಗೆಳೆಯರು ಓದಿ ನೋಡಿ 'ಚೆನ್ನಾಗಿದೆ, ಆದರೆ ಯಾವ ಪ್ರಕಾಶಕನೂ ಇದನ್ನು ತೆಗೆದುಕೊಳ್ಳಲಾರ' ಅಂದಿದ್ದೇ ಅಲ್ಲದೆ, ಕಾದಂಬರಿ ಹೇಗೆ ಬರೆಯುವುದು ಅಂತ ಚುಟುಕಾಗಿ ಪಾಠಾನೂ ಹೇಳಿದ್ದಾರೆ. ಬೈಂಡು ಮಾಡಿಟ್ಟಿರುವ ಕಾಪಿಗಳನ್ನು ನೋಡಿ ನಾನೇ ಸಂತೋಷ ಪಡುತ್ತೇನೆ. ಇನ್ನೊಂದು ಮಹಾಕೃತಿಯನ್ನು ಪ್ರಾರಂಭ ಮಾಡಿಲ್ಲ ಇನ್ನೂ.

ಈಗಲೂ ಕಂಪ್ಯೂಟರ್ ಮೇಲೆ ಕೆಲಸ ಮಾಡುತ್ತೇನೆ. ಈ ಲೇಖನ ಕೂಡ ಅದರಲ್ಲೇ ಬರೆದದ್ದು. ನನ್ನದೊಂದೇ ಪ್ರಾರ್ಥನೆ - ಯಾವ ಹೊಸ ಆವಿಷ್ಕಾರವೂ ನನ್ನ ಕಂಪ್ಯೂಟರಿಗೆ ಸೇರದಿರಲಿ ದೇವರೇ ಅಂತ. ಕೊನೆ ಮಾತು: ಈ ಲೇಖನವನ್ನು ಬರೆದು ಈಮೈಲಿನಲ್ಲಿ ಅಪರಂಜಿಗೆ ಕಳಿಸಿದೆ. ಸಿಕ್ಕಿತೇ ಅಂತ ಕೇಳಿದಾಗ ಸಂಪಾದಕರು ಸ್ನೇಲ್‌ಮೇಲ್‌ನಲ್ಲಿ ಕಳಿಸಿ ನೋಡೋಣ ಅಂದಾಗ ಅನ್ನಿಸಿತು; ಕಂಪ್ಯೂಟರ್ ಮುಚ್ಚಿಬಿಡೋಣವೇ ಅಂತ.



ಮೀನಾಕ್ಷಿ ಪುರಾಣ

– ಪ್ರೇಮಾ ಭಟ್

ಕಿಸಿಕಿಸಿ ನಕ್ಕಳು ಮೀನಾಕ್ಷಿ, ಕನ್ನಡಿಯ ಮುಂದೆ ನಿಂತು ಶೇವಿಂಗ್ ಮಾಡುತ್ತಿದ್ದ ನಾನು, ತಟ್ಟಂತ ತಿರುಗಿದೆ, ಅವಳ ನಗು ಇನ್ನೂ ನಿಂತಿರಲಿಲ್ಲ. ಆಶ್ಚರ್ಯವಾಯ್ತು,

''ಹುಚ್ಚುಗಿಚ್ಚು ಹಿಡಿಲಿಲ್ಲ ತಾನೇ'' ಎಂದೆ.

ಈಗವಳ ಮುಖ ಗಂಟಿಕ್ಕಿತು, ಉಮ್ ಅಂತ ಮುಖ ಊದಿಸಿಕೊಂಡು ಬಹಳ ಹೊತ್ತು ಮಾತನಾಡದೆ ಇದ್ದಳು. ಊಟಕ್ಕೆ ಕೂತಾಗ ''ಸ್ವಲ್ಪ ಹುಳಿ ಬಡಿಸೆ'' ಎಂದೆ. ಅವಳ ಸಿಟ್ಟಿನ್ನೂ ಇಳಿದಿರಲಿಲ್ಲ. ಸೌಟನ್ನು ತೆಗೆದು ತಪ್ಪಲೆಯ ತಳಕ್ಕೆ ಬಡಿದು ಸ್ವಲ್ಪವೆ ಸ್ವಲ್ಪ ಹುಳಿಯನ್ನು ಬಡಿಸಿದಳು. ತನ್ನ ಸಿಟ್ಟಿನ್ನೂ ಇಳಿದಿಲ್ಲ ಎನ್ನುವುದನ್ನು ತೋರಿಸಿದಳು. ಒಳ್ಳೆ ಗ್ರಹಚಾರಕ್ಕೆ ಬಂತಲ್ಲಪ್ಪ ಎಂದುಕೊಂಡು,

''ಯಾಕೆ ಏನಾಯ್ತೆ, ಬೆಳಗಿಂದ ಮುಖ ಊದಿಸಿಕೊಂಡಿದ್ದೀಯ'' ಎಂದೆ.

''ಆಗೋದೇನು ಬೆಳಗ್ಗೆ ಏಳ್ತಾ ಇದ್ದ ಹಾಗೆ ಮುಖಕ್ಕೆ ಮಂಗಳಾರತಿ ಆಯ್ತಲ್ಲ ಸಾಲ್ದ'' ಎಂದಳು.

''ಯಾರಿಂದ ಅನ್ನೋದನ್ನಾದರೂ ಹೇಳಬಾರದ'' ಎಂದಾಗ ಹೌಹಾರಿದಳು.

''ಅಯ್ಯೋ ಪಾಪ ಮಾಡೋದನ್ನೆಲ್ಲ ಮಾಡಿ ಈಗ ಏನಾಯ್ತು ಅಂತ ಕೇಳ್ತಾ ಇದ್ದೀರಲ್ಲ'' ಎಂದಳು.

''ನಾನು ಏನು ಮಾಡಿದೆ ಮಹರಾಯ್ತಿ ಅದನ್ನಾದರೂ ಹೇಳು, ನಾನಂತೂ ಮರೆಗುಳಿ'' ಎಂದೆ.

ಬೆಳಗ್ಗೆ ನಾನು ನಗ್ತ ಇದ್ದರೆ ನೀವು ನನ್ನ ಹುಚ್ಚಿ ಅನ್ನಬಹುದಾ, ನಿಮ್ಮಂತ ಗಂಡನನ್ನ ಕಟ್ಟಿಕೊಂಡರೆ ಹುಚ್ಚು ಹಿಡಿಯದೆ ಏನಾಗಬೇಕು ಹೇಳಿ'' ಎಂದು ಬುಳುಬುಳು ಅಳತೊಡಗಿದಳು.

''ಅಯ್ಯೋ ನನ್ನ ಚಿನ್ನ, ಇಷ್ಟಕ್ಕೆ ಅಳ್ತಾರೈ. ಏನೋ ತಿಳೀದೆ ತಪ್ಪು ಮಾಡಿದೆ. ನನ್ನ ಕ್ಷಮಿಸಿ ಬಿಡು'' ಎಂದರೆ ಅವಳು ಕೇಳಬೇಕಲ್ಲ, ನಾನು ನಕ್ಕದ್ದು ಯಾಕೆ ಅಂತ ಕೇಳಲಿಲ್ಲ ಎಂದು ತನ್ನ ಪುರಾಣ ಬಿಚ್ಚಲು ಮುಂದಾದಳು. ಕೇಳದಿದ್ದರೆ ಸಿಟ್ಟು ಬರುತ್ತದೆ. ಇದೆಲ್ಲಿಯ ಪ್ರಾರಬ್ಧ, ಕಛೇರಿಗೆ ಅವಳಿಗೂ ಹೊತ್ತಾಗುತ್ತದೆ ನನಗೂ ಹೊತ್ತಾಗುತ್ತದೆ,

''ಏನು ಹೇಳ್ತಿಯೋ ಹೇಳಿ ಬಿಡು, ಕೇಳ್ಕೊಂಡೆ ಹೋಗಿ ಬಿಡೋಣ'' ಎಂದಾಗ ಅವಳು ಮತ್ತೆ ಕಿಸಿಕಿಸಿ ನಗತೊಡಗಿದಳು.

''ಮೊದಲು ಹೇಳೆ ಮಹರಾಯ್ತಿ, ಆಮೇಲೆ ನಗುವೆಯಂತೆ'' ಎಂದೆ. ಮತ್ತೆಲ್ಲಿ ಗಂಟುಮುಖ ಮಾಡಿಕೊಳ್ಳುತ್ತಾಳೋ ಎಂದು ಹೆದರುತ್ತಲೇ, ಮಹಾಸೂಕ್ಷ್ಮ ಅವಳು,

ಸಣ್ಣಸಣ್ಣದಕ್ಕೆಲ್ಲ ಕೋಪವನ್ನು ಬರಿಸಿಕೊಳ್ಳುತ್ತಾಳೆ, ಎಂದುಕೊಳ್ಳುತ್ತಲೇ, ''ಊಟ ಮಾಡುತ್ತಲೇ ನಿನ್ನ ಮಾತನ್ನು ಕೇಳುತ್ತೇನೆ'' ಎಂದೆ. ಒಪ್ಪಿಕೊಂಡಳು.

''ಅಲ್ಲಾರಿ'' ಅಂತ ಶುರು ಮಾಡಿದಳು

''ಹೇಳು ಹೇಳು ಪೀಠಿಕೆ ಇಲ್ಲದೆ ನೇರ ವಿಷಯಕ್ಕೆ ಬಂದು ಬಿಡು'' ಎಂದೆ.

''ನಮ್ಮ ಆಫೀಸ್ ನೋಡಿದ್ದೀರಲ್ಲ'' ಎಂದಳು,


''ನೋಡಿದ್ದೇನಲ್ಲ'' ಎಂದೆ.

''ಇವತ್ತು ಪೇಪರಿನಲ್ಲಿ ಒಂದು ಸುದ್ದಿ ಬಂದಿದೆ, ಆಫೀಸಿನಲ್ಲಿ ಲೈಂಗಿಕ ಕಿರುಕುಳ ಅಂತ, ಕಣ್ಣಾಡಿಸಿದ್ದೀರ'' ಅಂತ ಕೇಳಿದಳು.

''ಇಲ್ಲ''

''ಅಯ್ಯೋ ನೀವೆಲ್ಲಿ ನೋಡ್ತೀರ, ಬೆಳಗೆದ್ರೆ ನಿಮ್ಮ ಕಣ್ಣಿಗೆ ಬೀಳೋದೆ ಆ ಗಂಡ ಗುಂಡಿ ರಾಜಕೀಯ, ಅದು ಬಿಟ್ರೆ ನೀವೆಲ್ಲಿ ಉಳಿದ ವಿಷಯದ ಕಡೆ ಕಣ್ಣಾಡಿಸ್ತೀರ, ಗೊತ್ತಿದ್ದು ಗೊತ್ತಿದ್ದೂ ಕೇಳ್ತೇನಲ್ಲ ನನ್ನ ಬುದ್ಧಿಗಿಷ್ಟು'' ಎಂದು ತನ್ನನ್ನೇ ಒಂದಿಷ್ಟು ಬೈದುಕೊಂಡು ಮಾತು ಮುಂದುವರೆಸಿದಳು.

''ಲೈಂಗಿಕ ಕಿರುಕುಳ ಅಂದ್ರೆ, ಅದು ಹೇಗ್ರಿ, ನಾವು, ಸ್ವಚ್ಛವಾಗಿದ್ದು, ಗಂಭೀರವಾದ ಉಡುಗೆತೊಡುಗೆ ತೊಟ್ಟು, ಅವಶ್ಯಕತೆಗಿಂತ ಹೆಚ್ಚು ಗಂಡಸರ ಹತ್ತಿರ ಮಾತನಾಡದೆ ಇದ್ದುಬಿಟ್ರೆ ಯಾರ್ರಿ ನಮ್ಮ ಸುದ್ದಿಗೆ ಬರ್ತಾರೆ'' ಅಂದ್ಲು. ಆವಳು ಹೇಳೋದರಲ್ಲಿ ಸತ್ಯಾಂಶ ಇದೆ ಎನಿಸಿತು. ''ಅಲ್ರಿ ಆ ಲಾವಣ್ಯ ಇದ್ದಾಳಲ್ಲ, ನಮ್ಮ ಆಫೀಸ್ ಕೊಠಡಿಯ ತ್ರಿಕೋಣದಲ್ಲಿ ಕೂತು ಕೆಲಸ ಮಾಡ್ತಿರ್ತಾಳಲ್ಲ, ಹಲ್ಕ ಅವಳ ಉಡುಗೆ ನೋಡಿದ್ದೀರ, ಯಾವತ್ತಾದರೂ ಅವಳು ಮೈಪೂರ್ತ ಬಟ್ಟೆ ಧರಿಸೋದನ್ನ ನೋಡಿದ್ದೀರ, ಹೀಗೆ ಆಫೀಸಿಗೆ ಬಂದರೆ ಆ ಪೆಡಂಭೂತ ದುರುದುರು ನೋಡ್ತಾನೆ ಅಂತ ಕ್ಯಾಕರಿಸಿ ಉಗುಳಿದರು ಒಂದೆ ಬಿಟ್ಟರೂ ಅಷ್ಟೇ. ಮೊದಲು ನಾವು ಸರಿಯಾಗಿರಬೇಕು, ಅಷ್ಟೇ ಅಲ್ಲ ಕಣ್ರೀ, ಅವಳು ಕುಲುಕುತ್ತ ಬಳುಕುತ್ತ ಮಾತನಾಡುವಾಗ ಅವಳನ್ನು ನೋಡಬೇಡ ಎಂದರೆ ಅವನಿಗೆ ಕಣ್ಣಿಲ್ಲವೇ? ನೋಡಲೇಬಾರದು ಎಂದರೆ ಸಭ್ಯವಾದ ಉಡುಗೆಯಲ್ಲಿ ಬರಬೇಡವೆ? ಇದನ್ನು ನೆನೆದು ಬೆಳಗ್ಗೆ ಪತ್ರಿಕೆಯಲ್ಲಿ ಬಂದ ಸುದ್ದಿ ಓದಿ, ಯಾವ್ದನ್ನೂ ವಿಚಾರ ಮಾಡದೆ ಒಂದೇ ಕಡೆ ಪಾರದರ್ಶಕವಾಗಿ ನೋಡ್ತಾರಲ್ಲ ಅಂತ ಯೋಚಿಸಿದಾಗ ನಗು ಬಂತು ಕಣ್ರಿ, ಯಾಕೆ ಏನು ಎಂದು ವಿಚಾರಿಸದೆ ನನ್ನ ಹುಚ್ಚಿ ಅಂದುಬಿಡೋದ. ಹೇಳ್ರಿ ನೀವೆ ಲೈಂಗಿಕ ಕಿರುಕುಳಗಳು ಆಗ್ತಿರೋದು ಯಾಕೆ, ಎಷ್ಟೋ ಸಾರೆ ಹೆಣ್ಣಿನಲ್ಲೂ ತಪ್ಪು ಇರುತ್ತೆ; ತಪ್ಪಿಟ್ಟುಕೊಂಡು ಪುರುಷರನ್ನು ದೂರೋದ'' ಎಂದವಳೆ ನನ್ನಿಂದ ಉತ್ತರ ಬರಲು ಸ್ವಲ್ಪ ತಡವಾದಾಗ, ''ಈ ಗಂಡಸರು ಚಪಲ ಎಲ್ಲಿಬಿಡ್ತಾರೆ. ಲಾವಣ್ಯಾ ಧುತ್ತೆಂದು ಪ್ರತ್ಯಕ್ಷವಾಗಿರಬೇಕು, ಕನಸು ಕಾಣ್ತಾ ಇದ್ದಾರೆ ಕನಸು'' ಎಂದು ಗೊಣಗಿಕೊಳ್ಳುತ್ತ ಗಂಡಸರನ್ನೇ ದೂರಿದಳು.


ಹೋದ ಬಾರಿ ಕಳ್ಳರು ಬಂದಾಗ್ಲೇ ನಿಮಗೆ ಹೇಳ್ಲಿಲ್ವೆ? ರಾತ್ರಿ ಹೊತ್ನಲ್ಲಿ ಹಾಗೆ ಜೋರಾಗಿ "ಚಿನ್ನ, ರನ್ನ, ... ಬಂಗಾರ" ಅಂತ ಕರೀಬೇಡಿ!
© 2002 Janardhana Swamy [www.jswamy.com]

Reg. No. : CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR